MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ “ಇದು ರಾಷ್ಟ್ರದ ಧ್ವನಿ”

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 307 | ಬುಧವಾರ : 24-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 307 | WEDNESDAY : 24-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00


## ಶಿಸ್ತು, ಬದ್ಧತೆಯ ಅಧ್ಯಯನದಿಂದ ಗುಣಮಟ್ಟದ ಸಂಶೋಧನೆಗಳು ಸಾಧ್ಯ: ಕೃಷಿ ವಿವಿ ಕುಲಪತಿ

**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.23**–ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಯ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಶಿಸ್ತು ಮತ್ತು ಬದ್ಧತೆಯನ್ನು ರೂಢಿಸಿಕೊಂಡಲ್ಲಿ ಗುಣಮಟ್ಟದ ಸಂಶೋಧನೆಗಳು ನಡೆದು, ಆ ಫಲಿತಾಂಶದಿಂದ ರೈತರ ಹಾಗೂ ಸಮಾಜದ ಅಭಿವೃದ್ಧಿಗೆ ಸಹಕಾರಿ ಯಾಗಲಿದೆ ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿ ಡಾ. ಎಂ. ಹನುಮಂತಪ್ಪ ಅವರು ಹೇಳಿದರು.




ಮಂಗಳವಾರ ದಂದು ನಗರದ ಕೃಷಿ ವಿವಿಯ ಪ್ರೇಕ್ಷಾಗೃಹದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ನಿರ್ದೇಶನಾಲಯದ ವತಿಯಿಂದ ಹಮ್ಮಿಕೊಳ್ಳಲಾಗಿದ್ದರಾಷ್ಟ್ರೀಯ ಸ್ನಾತಕೋತ್ತರ ಸಂಶೋಧನಾ ಸಮ್ಮೇಳನ ಹಾಗೂ ಖ್ಯಾತ ಕೃಷಿ ವಿಜ್ಞಾನಿ ದಿ.ಡಾ.ಎಸ್.ಎ. ಪಾಟೀಲ್ ಅವರ ಸ್ಮರಣಾರ್ಥ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಸಂಶೋಧನೆಗಳಿಂದ ಗಳಿಸಿದ ಜ್ಞಾನ ಹಾಗೂ ಕೌಶಲ್ಯಗಳನ್ನು ಇತರರ ಜೊತೆ ವಿನಿಮಯ ಮಾಡಿಕೊಂಡು ಸಂಶೋಧನೆಗೆ ಸಂಬಂಧಿಸಿದ ಜ್ಞಾನವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಕೈಗೊಳ್ಳಲು ಅನೇಕ ಸೌಕರ್ಯಗಳನ್ನು ಒದಗಿಸಲಾಗಿದ್ದು, ಅವುಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು.

ಹವಮಾನ ವೈಫರಿತ್ಯ, ಸೆನ್ಸಾರ್ ಆಧಾರಿತ ನೀರಾವರಿ, ಕೃತಕ ಬುದ್ಧಿಮತ್ತೆ, ಭೌಗೋಳಿಕ ಸೂಚನೆ ಆಧಾರಿತ ತಂತ್ರಜ್ಞಾನ, ಇ-ಸ್ಯಾಪ್, ಇತ್ಯಾದಿ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಸಂಶೋಧನೆ **(2ನೇಪುಟಕ್ಕೆ)**

## ಉತ್ತಮ ಆರೋಗ್ಯಕ್ಕೆ ಆಯುರ್ವೇದ ಪೂರಕ: ನರಸಮ್ಮ ಮಾಡಗಿರಿ

**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.23**–ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಉತ್ತಮ ಆರೋಗ್ಯಕ್ಕೆ ಆಯುರ್ವೇದವು ಪೂರಕವಾಗಿದೆ. ಆಯುರ್ವೇದದ ಮೌಲ್ಯಿಕ ಅಂಶಗಳನ್ನು ಎಲ್ಲರೂ ಅರಿತು ಸದುಪಯೋಗ ಪಡಿಸಿಕೊಳ್ಳಬೇಕು ಎಚಿದು ಮಹಾನಗರ ಪಾಲಿಕೆಯ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ ಅವರು ಹೇಳಿದರು.



ನಗರದ ಜಿಲ್ಲಾ ಸರಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆಯುಷ್ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜನರಿಗಾಗಿ ಮತ್ತು ಜಗತ್ತಿಗಾಗಿ ಆಯುರ್ವೇದ ಎಂಬ ಘೋಷವಾಕ್ಯದೊಂದಿಗೆ ಸೆ.23ರಂದು ನಡೆದ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಉದ್ಘಾಟಿಸಿ ಹಾಗೂ ಧನ್ವಂತರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಶಂಕರಗೌಡ ಅವರು ಮಾತನಾಡಿ, ನಮ್ಮ ಮನಸ್ಸು, ಆತ್ಮ ಮತ್ತು ದೇಹ ಮೂರೂ ಆರೋಗ್ಯವಾಗಿದ್ದಲ್ಲಿ ಮನುಷ್ಯ ಸದಾಕಾಲ ಚೇತನದಿಂದಿರಲು ಸಾಧ್ಯಾಗುತ್ತದೆ ಎಂದರು.

ಇಡೀ ಭರತ ಖಂಡದಲ್ಲಿ ಇಂದಿನ ದಿನ ಉತ್ತರಾರ್ಧ ಗೋಳದಲ್ಲಿ ಸೂರ್ಯನು ದಕ್ಷಿಣಾರ್ಧದಲ್ಲಿ ಚಲಿಸುವುದರಿಂದ 12 ಗಂಟೆ ಹಗಲು ಮತ್ತು 12 ಗಂಟೆ ರಾತ್ರಿ ಸಮತಲವಾಗಿರುತ್ತದೆ. ಆದ್ದರಿಂದ ಈ ದಿನದಂದೇ ನಮ್ಮ ಆಯುಷ್ ಇಲಾಖೆಯಿಂದ ಆಯುರ್ವೇದ ದಿನಾಚರಣೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಅವರು ಮಾತನಾಡಿ, ಸುಮಾರು 9 ವರ್ಷಗಳಿಂದ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು ಆಚರಿಸುತ್ತಿದ್ದು, ಇದನ್ನು ಅಂತಾರಾಷ್ಟ್ರೀಯವಾಗಿ ಮತ್ತು ಪ್ರಪಂಚದಾದ್ಯಂತ ಆಚರಿಸಲು ನಾವೆಲ್ಲ ನಮ್ಮ ಆಯುರ್ವೇದ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಆಯುರ್ವೇದ ವೈದ್ಯರು, ಅಲೋಪತಿ ಮತ್ತು ಹೋಮಿಯೋಪಥಿ ಪ್ರಾಕ್ಟೀಸ್ ಮಾಡದೆ ಚಿಕಿತ್ಸೆ ನೀಡುತ್ತಿರುವುದು ಕಾನೂನು**(2ನೇಪುಟಕ್ಕೆ)**

## ಪೌರಕಾರ್ಮಿಕರು ದೇಶದ ಸೈನಿಕರಿಗೆ ಸಮ: ಶಾಸಕ ಜಿ.ಹಂಪಯ್ಯ ನಾಯಕ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಸೆ.23**– ಪೌರಕಾರ್ಮಿಕರು ತಮ್ಮ ಜೀವದ ಹಂಗು ತೊರೆದು ನಗರವನ್ನು ಸ್ವಚ್ಛಗೊಳಿಸುವ ಸೇವೆ ಸಲ್ಲಿಸುತ್ತಿದ್ದು, ಅವರನ್ನು ದೇಶದ ಸೈನಿಕರಿಗೆ ಹೋಲಿಸಿದರೆ ತಪ್ಪಾಗಲಾರದು ಎಂದು ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅಭಿಪ್ರಾಯಪಟ್ಟರು. ಮಾನ್ವಿ ಪುರಸಭೆ ಆವರಣದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ಪ್ರತಿದಿನ ಬೆಳಗಿನ ಜಾವ 5 ಗಂಟೆಯಿಂದಲೇ ಪೌರಕಾರ್ಮಿಕರು ಇಡೀ ನಗರವನ್ನು ಸ್ವಚ್ಛಗೊಳಿಸುತ್ತಾರೆ. ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಿ, ವಿಲೇವಾರಿ ಮಾಡುವ ಅವರ ಕೆಲಸ ಶ್ಲಾಘನೀಯ. ಇಂತಹ ಜವಾಬ್ದಾರಿಯುತ ಕೆಲಸವನ್ನು ತಮ್ಮ ಜೀವದ ಬೆಲೆ ಲೆಕ್ಕಿಸದೆ ಮಾಡುವ ಅವರಿಗೆ, ದೇಶವನ್ನು ಕಾಯುವ ಸೈನಿಕರ ಸಮಾನ ಎಂದು ಹೇಳಬಹುದು ಎಂದರು.

ಶಾಸಕರು ಪೌರಕಾರ್ಮಿಕರಿಗೆ ತಮ್ಮ ವೈಯಕ್ತಿಕ ಜೀವನ ಮತ್ತು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ನೀಡುವಂತೆ ಕಿವಿಮಾತು ಹೇಳಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ, ಅವರನ್ನು ಸಮಾಜದ ಉತ್ತಮ ಪ್ರಜೆಗಳನ್ನಾಗಿ ರೂಪಿಸಲು ಪ್ರಯತ್ನಿಸುವಂತೆ ಸಲಹೆ ನೀಡಿದರು.


ಈ ಸಂದರ್ಭದಲ್ಲಿ ಪುರಸಭೆಯ ಅಧ್ಯಕ್ಷರಾದ ಮೀನಾಕ್ಷಿ ಡಿ. ರಾಮಕೃಷ್ಣ, ಪುರಸಭೆ ಮುಖ್ಯ ಅಧಿಕಾರಿ ಪರಶುರಾಮ್ ದೇವಮಾನೇ, ಮಾಜಿ ಪುರಸಭೆ ಅಧ್ಯಕ್ಷರಾದ ಲಕ್ಷ್ಮೀದೇವಿ ನಾಯಕ್, ಮಹೇಂದ್ರ ನಾಯಕ್, ಸಾಬೀರ್ ಪಾಷಾ, ಕೆ. ಸುಕುಮನಿ, ಎಚ್. ಬಿ. ಎಂ. ಹುಸೇನ್ ಭಾಷಾ, ಭಾಷಾ ಟೈಲರ್, ಚಂದ್ರು ಕಾಜಗಾರ್, ಬಸವರಾಜ್ ಭಜಂತ್ರಿ, ವೆಂಕಟೇಶ್ ನಾಯಕ್, ಮುಖಂಡರಾದ ಜಮೀಲ ಅಹಮದ್, ಶರಣು ಮ್ಯಾದ, ಶಿವರಾಜ್ ನಾಯಕ್, ಪೌರ ನೌಕರರ ಸಂಘದ ಅಧ್ಯಕ್ಷರಾದ ಹನುಮಂತ ಗೌಡ, ನೈರ್ಮಲ್ಯ ಅಧಿಕಾರಿ ಮಹೇಶ್ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು ಮತ್ತು ದಿನಾಚರಣೆಯ ಅಂಗವಾಗಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ಸಿಬ್ಬಂದಿಗಳಿಗೆ ಶಾಸಕರು ಬಹುಮಾನಗಳನ್ನು ವಿತರಿಸಿದರು.

## ಅರೇ ಕಾನೂನು ಸ್ವಯಂ ಸೇವಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಸದವಕಾಶ

**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.23**–ಅರೇ ಕಾನೂನು ಸ್ವಯಂ ಸೇವಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಆಸಕ್ತರು ಮುಂದೆ ಬರಬೇಕು ಎಂದು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯರಾದ ನ್ಯಾ. ಶಶಿಧರ್ ಶೆಟ್ಟಿ ಅವರು ಹೇಳಿದರು.



ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಚೇರಿ ಬೆಂಗಳೂರಿನಿಂದ ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯ ಸದಸ್ಯ ಕಾರ್ಯದರ್ಶಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳೊಂದಿಗೆ ಸೆ.23ರಂದು ಆನ್‌ಲೈನ್ ಸಭೆ ನಡೆಸಿ ಅವರು ಮಾತನಾಡಿದರು.

ಜನರ ಸಮಸ್ಯೆ ತಿಳಿಯಲು ಮತ್ತು ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಅರೆ ಕಾನೂನು ಸ್ವಯಂ ಸೇವಕರ ಪಾತ್ರ ಬಹಳ ಮುಖ್ಯವಾಗಿದೆ.

ಹಾಗಾಗಿ ರಾಜ್ಯದ ಎಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಅರೆ ಕಾಲಿಕ ಸ್ವಯಂ ಸೇವಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಇದಕ್ಕೆ ಯಾವುದೇ ಸಂಬಳ ಇರುವುದಿಲ್ಲ. ಅಕ್ಟೋಬರ್ 20 ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶವಿದೆ ಎಂದರು.

ನಿವೃತ್ತ ಶಿಕ್ಷಕರು, ಮಾಜಿ ಪಂಚಾಯತ ಸದಸ್ಯರು, ನಿವೃತ್ತ ಸರಕಾರಿ ನೌಕರರು, ತೃತೀಯ ಲಿಂಗಿಗಳು, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು, ಕಾನೂನು ವಿಧ್ಯಾರ್ಥಿಗಳು, ಮಹಿಳಾ ಸಂಘಗಳ ಸದಸ್ಯರು, ನಿವೃತ್ತ ಸೈನಿಕರು ಸೇರಿದಂತೆ ಇತರರು ಅರೆ ಕಾನೂನು ಸ್ವಯಂ ಸೇವಕರ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದರು.

ಬಹುತೇಕ ಹಳ್ಳಿಯ ಜನತೆಗೆ ಜನನ ಮರಣ ನೋಂದಣಿ ಮಾಡಿಸಬೇಕೆಂಬ ಮಾಹಿತಿ ಇರುವುದಿಲ್ಲ. ಮಕ್ಕಳು ಕಳೆದಾಗ ತಕ್ಷಣ ಮಕ್ಕಳ ರಕ್ಷಣಾ ಇಲಾಖೆಗೆ ಅಥವಾ ಪೊಲೀಸರಿಗೆ ತಿಳಿಸಿದಲ್ಲಿ ಬೇಗನೆ ಪತ್ತೆ ಹಚ್ಚಲು ಅನುಕೂಲವಾಗುತ್ತದೆ. ಕೆಲ ಪ್ರಕರಣಗಳಲ್ಲಿ ಮಾನಸಿಕ ಅಸ್ವಸ್ಥರನ್ನು ಮನೆಯಲ್ಲಿ ಕೂಡಿ ಹಾಕಿರುತ್ತಾರೆ. ಅಂತಹವರನ್ನು ಆಶಾ, ಅಂಗನವಾಡಿ ಕಾರ್ಯಕರ್ತರು ಮತ್ತು ಅರೆ ಕಾನೂನು ಸ್ವಯಂ ಸೇವಕರ ಮೂಲಕ ಮಾಹಿತಿ ಪಡೆದು ಅವರಿಗೆ ರಕ್ಷಣೆ ಮಾಡಲಾಗುತ್ತದೆ.

ವಿಶೇಷವಾಗಿ ಹಳ್ಳಿಯ ಜನರಿಗೆ ಮಾಹಿತಿ ಒದಗಿಸುವ ಮಹತ್ವದ ಕಾರ್ಯವನ್ನು ಅರೆ ಕಾನೂನು ಸ್ವಯಂ ಸೇವಕರು ಮಾಡಬೇಕಾಗುತ್ತದೆ ಎಂದರು.**(2ನೇಪುಟಕ್ಕೆ)**

## ಬೆಳಗಾವಿ – ರಾಯಚೂರು ರಾಷ್ಟ್ರೀಯ ಹೆದ್ದಾರಿ: ಸಿರವಾರದಿಂದ ಜಂಟಿ ಸರ್ವೆ ಆರಂಭ



**ಯುವ ಮಾರ್ಗ ಸುದ್ದಿ**

**ಸಿರವಾರ, ಸೆ.23**–ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅವರ ಅಧಿಸೂಚನೆಯಂತೆ ರಾಷ್ಟ್ರೀಯ ಹೆದ್ದಾರಿ –748ಎ ಗೆ ಸಂಬಂಧಿಸಿದಂತೆ 273.4 ಕಿ.ಮೀಯಿಂದ 321 ಕಿ.ಮೀ ರವರೆಗೆ ರಸ್ತೆಗೆ ಒಳಪಡುವ ಸಿರವಾರದಿಂದ ರಾಯಚೂರುವರೆಗಿನ 7ನೇ ಪ್ಯಾಕೇಜ್ ಕಾಮಗಾರಿ 40 ಕಿ.ಮೀ. ವರೆಗೆ ಸರ್ವೆ ಕಾರ್ಯಕ್ಕೆ ಸಿರವಾರ ಪಟ್ಟಣದ ಹೊರವಯದಲ್ಲಿ ರಾಯಚೂರು ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಸೋಮವಾರ ಚಾಲನೆ ನೀಡಿದರು.

ನಂತರ ಅವರು ಮಾತನಾಡಿ ಇಂದಿನಿಂದ ಸಿರವಾರದಿಂದ ರಾಯಚೂರು ವರೆಗೆ ಬೆಳಗಾವಿ ರಾಯಚೂರು ರಾಷ್ಟ್ರೀಯ ಹೆದ್ದಾರಿ 748ಎ ರಸ್ತೆ ಸರ್ವೆ ಕಾರ್ಯ ತುರ್ತು ನಡೆಯಲಿದ್ದು 2 ತಿಂಗಳಲ್ಲಿ ಪೀರ್ಣಗೊಳ್ಳಿದ್ದು ನಂತರ ಈ ಯೋಜನೆಯಲ್ಲಿ ಬರುವ ರೈತರಿಗೆ ಸರ್ಕಾರದಿಂದ ಶೀಘ್ರ ಪರಿಹಾರ ನೀಡಲಾಗುತ್ತದೆ ಇನ್ನೂ 6 ತಿಂಗಳಲ್ಲಿ 7ನೇ ಪ್ಯಾಕೇಜ್ ನ ಕಾಮಗಾರಿ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

ಈ ಯೋಜನೆಯಲ್ಲಿ ಒಳಪಟ್ಟ ರೈತರ ಭೂಮಿಗಳಿಗೆ ಸರ್ಕಾರ ನಿಗಧಿಪಡಿಸಿದ ದರದಲ್ಲಿ ಪರಿಹಾರ ಹಾಕಲಾಗುವುದು ಯಾವುದೇ ಅನ್ಯಾಯ ಆಗಲು ಅವಕಾಶವಿಲ್ಲ ಏನಾದರೂ ಸಮಸ್ಯೆ ಅಥವಾ ಅನುಮಾನ ಕಂಡು ಬಂದಲ್ಲಿ ರೈತರು ನೇರವಾಗಿ ನಮ್ಮ ಕಛೇರಿಗೆ ಬಂದು ಸಂಶಯ ಹಾಗೂ ಸಮಸ್ಯೆಗಳ ಪರಿಹಾರ ಮಾಡಿಕೊಳ್ಳಲು ಹೇಳಿದರು.

ಈ ಸಂದರ್ಭದಲ್ಲಿ ಸಿರವಾರ ತಹಶಿಲ್ದಾರರಾದ ಅಶೋಕ ಪವಾರ್, ಪಟ್ಟಣ ಪಂಚಾಯತಿ ಅಧ್ಯಕ್ಷ ವೈ.ಭೂಪನಗೌಡ, ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸರ್ವೆ ಅಧಿಕಾರಿ ಅನೀಲ್ ಕುಮಾರ್ ಯಾದವ್, ರೈತರಾದ ಎನ್.ಉದಯಕುಮಾರ್, ಪ.ಪಂ. ಉಪಾಧ್ಯಕ್ಷೆ ಲಕ್ಷ್ಮೀ ಆದೆಪ್ಪ, ಸದಸ್ಯ ಕೃಷ್ಣ ನಾಯಕ, ಎಂ.ಪ್ರಕಾಶಪ್ಪ ಸೇರಿದಂತೆ ಹೆದ್ದಾರಿ ಅಧಿಕಾರಿಗಳು, ರೈತರು ಇದ್ದರು.

## ಶೈಕ್ಷಣಿಕ ಅಭಿವೃದ್ಧಿಗೆ ನಂಜುಂಡಪ್ಪ ವರದಿ ವರದಾನ: ಶಾಸಕಿ ಕರೆಮ್ಮ ನಾಯಕ ಅಭಿಮತ

**ಯುವ ಮಾರ್ಗ ಸುದ್ದಿ**

**ಅರಕೇರಾ,ಸೆ.23**– ಕ್ಷೇತ್ರದ ಅಭಿವೃದ್ಧಿಗೆ ನಂಜುಂಡಪ್ಪ ವರದಿ ಅನುಷ್ಠಾನ ಬಹು ದೊಡ್ಡ ಕೊಡುಗೆಯಾಗಿದೆ ಅದಕ್ಕಾಗಿ ಹೆಚ್ಚಿನ ಅನುದಾನ ಬರುತ್ತಿದೆ ಎಂದು ಶಾಸಕಿ ಕರೆಮ್ಮ ಜಿ.ನಾಯಕ ಹೇಳಿದರು.



ತಾಲ್ಲೂಕಿನ ಬಂಡೆಗುಡ್ಡ ಗ್ರಾಮದಲ್ಲಿ 5 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ ನೂತನ ಡಾ.ಬಿ.ಆರ್ ಅಂಬೇಡ್ಕರ್ ವಸತಿ ನಿಲಯ ಕಟ್ಟಡವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದರು. ಕ್ಷೇತ್ರಕ್ಕೆ ಅಂಟಿಕೊಂಡಿರುವ ಭ್ರಷ್ಟಾಚಾರ ಕಳಂಕವನ್ನು ಹೋಗಲಾಡಿಸಲು ಪಾರದರ್ಶಕ ಆಡಳಿತ ನೀಡಲಾಗುತ್ತಿದೆ. ಚುನಾವಣೆ ಬಂದಾಗ ರಾಜಕೀಯ ಮಾಡೋಣ ಮುಗಿದ ನಂತರ ಪ್ರತಿಯೊಬ್ಬರು ಪಕ್ಷಾತಿೀತವಾಗಿ ಕೈ ಜೋಡಿಸಿದಾಗ ಶೈಕ್ಷಣಿಕ ಅಭಿವೃದ್ಧಿ ಸಾಧ್ಯ. ಗುಡ್ಡಗಾಡು ಪ್ರದೇಶದ ವ್ಯಾಪ್ತಿಯಲ್ಲಿ ತಾಂಡಗಳು ಇವೆ. ಇಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಲವು ಕಾರ್ಯಕ್ರಮ ನೀಡಲಾಗುತ್ತಿದೆ. ಸುಸಜ್ಜಿತ ಕಟ್ಟಡವನ್ನು ಸ್ವಚ್ಚತೆಯಿಂದ ಕಾಪಾಡಿಕೊಳ್ಳುವುದು ಇಲ್ಲಿನ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರದ್ದಾಗಿದೆ.

ಜನ ಸಾಮಾನ್ಯರ ಕೆಲಸ ಕಾರ್ಯಗಳನ್ನು ಅಧಿಕಾರಿಗಳು ತ್ವರಿತವಾಗಿ ಮಾಡಿಕೊಡಬೇಕು. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಜನರ ಸೇವಕರಾಗಿ ಕೆಲಸ ಮಾಡಬೇಕು. ಅಭಿವೃದ್ಧಿಯ ವಿಷಯದಲ್ಲಿ ಅಧಿಕಾರಿಗಳು ಕುಂಟು ನೆಪ ಹೇಳಿದರೆ ಸಾಲದು ಎಂದು ತಾಕೀತು ಮಾಡಿದರು.

ತಾಪಂ ಅಧಿಕಾರಿ ಅಣ್ಣಾರಾವ್, ಲೋಕೋಪಯೋಗಿ ಇಲಾಖೆ ಅಧಿಕಾರಿ ಬನ್ನಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಮಹದೇವಯ್ಯ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಜಕುಮಾರ ಡೋಣಿ, ಮಾಜಿ ತಾಪಂ ಸದಸ್ಯ ಗೋವಿಂದರಾಜ ನಾಯಕ, ಸಿದ್ದಣ್ಣ ದೊಂಡಂಬಳಿ, ಹನುಮಯ್ಯ ಗಾಲಿ, ವೆಂಕಟೇಶ, ಸಂತೋಷ ನಾಯಕ, ತಿಮ್ಮಾರಡ್ಡಿ ಜಾಗಟಗಲ್ ಬಿಆರ್ ಪಿ ಶಿವಕುಮಾರ ನಾಡಗೌಡ, ಸೇರಿದಂತೆ ಗ್ರಾಮಸ್ಥರು ಇದ್ದರು.

## ಮೊದಲನೇಯ ಪುಟದಿಂದ

# ಶಿಸ್ತು, ಬದ್ಧತೆಯ ಅಧ್ಯಯನದಿಂದ ಗುಣಮಟ್ಟದ ಸಂಶೋಧನೆಗಳು ಸಾಧ್ಯ: ಕೃಷಿ ವಿವಿ ಕುಲಪತಿ

ಕೈಗೊಳ್ಳಬೇಕೆಂದರು.ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಮಂಡಿಸಲಿರುವ ಪ್ರಬಂಧ ಮಂಡನೆ ಹಾಗೂ ಭಿತ್ತಿಚಿತ್ರಗಳ ಫಲಿತಾಂಶಗಳು ಏನೇ ಬರಲಿ, ಅವುಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಮುಂದಿನ ದಿನಗಳಲ್ಲಿ ತಾವು ಕೈಗೊಳ್ಳಲಿರುವ ಸಂಶೋಧನೆಗಳನ್ನು ಬಲವರ್ಧಿಸಿಕೊಳ್ಳಬೇಕೆಂದು ತಿಳಿಸಿದರು.

ಈ ವೇಳೆ ವಿಶ್ವವಿದ್ಯಾಲಯದ ನಿವೃತ್ತ ಶಿಕ್ಷಣ ನಿರ್ದೇಶಕರಾಗಿದ್ದ ಡಾ.ಎಂ.ಜಿ.ಪಾಟೀಲ್ ಅವರು ಮಾತನಾಡಿ, ಗುಣಮಟ್ಟದ ಸಂಶೋಧನಾ ಫಲಿತಾಂಶಗಳನ್ನು ಮಂಡಿಸುವುದರ ಜೊತೆಗೆ ಆ ಸಂಶೋಧನೆಗಳು ಮುಂದೆ ರೈತರ ಕ್ಷೇತ್ರದಲ್ಲಿ ಅಳವಡಿಕೆಯಾಗಲು ಸಹಕಾರಿಯಾಗುವಂತಿರಬೇಕು ಎಂದರು.

ವಿದ್ಯಾರ್ಥಿಗಳು ರೈತರ ಜೊತೆ ಇದ್ದು, ಅವರೊಂದಿಗೆ ವಿಚಾರ ವಿನಿಮಯ ಮಾಡಿ ಅವರ ಸಮಸ್ಸೆಗಳನ್ನು ಅರಿತುಕೊಳ್ಳಬೇಕೆಂದು ಸಲಹೆ ನೀಡಿದರು.ಇಂತಹ ಸಮ್ಮೇಳನಗಳು ವಿದ್ಯಾರ್ಥಿಗಳಲ್ಲಿ ಧೈರ್ಯ, ಆತ್ಮವಿಶ್ವಾಸ ಹಾಗೂ ತಮ್ಮನ್ನು ಹೊರಜಗತ್ತಿಗೆ ತೆರೆದುಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಈ ವೇಳೆ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಗೌರವಾನ್ವಿತ ಸದಸ್ಯರಾದ ಮಲ್ಲಿಕಾರ್ಜುನ ಅವರು ಮಾತನಾಡಿ, ಡಾ. ಎಸ್.ಎ ಪಾಟೀಲ್ ಅವರು ಅಭಿವೃದ್ಧಿಪಡಿಸಿದ ಹತ್ತಿಯ ತಳಿ ವರಲಕ್ಷ್ಮೀಯು ರೈತರಿಗೆ ಇಂದಿಗೂ ಕೂಡ ವರದಾನವಾಗಿ, ಡಾ.ಎಸ್ ಎ ಪಾಟೀಲರು ರೈತರ ಮನಸಿನಲ್ಲಿ ಅಜರಾಮರವಾಗಿ ಉಳಿಯಲಿದ್ದಾರೆ. ವಿಶ್ವವಿದ್ಯಾಲಯದ ವಿಜ್ಞಾನಿಗಳು ಈ ನಿಟ್ಟಿನಲ್ಲಿ ಕಾರ್ಯಗತವಾಗಬೇಕೆಂದು ತಿಳಿಸಿದರು.ವಿದ್ಯಾರ್ಥಿಗಳ ಸಂಶೋಧನಾ ಫಲಿತಾಂಶಗಳು ರೈತರಿಗೆ ತಲುಪಿದರೆ ಮಾತ್ರ ಇಂತಹ ಸಮ್ಮೇಳನಗಳ ಉದ್ದೇಶ ಸಾರ್ಥಕವಾಗುತ್ತದೆಂದರು.

ಇದೇ ಸಂದರ್ಭದಲ್ಲಿ ಡಾ. ನಾರಾಯಣರಾವ್, ಡಾ. ಜಾಗೃತಿ ದೇಶಮಾನ್ಯ, ಡಾ.ಮಲ್ಲಿಕಾರ್ಜುನ, ಅಯ್ಯನಗೌಡರ, ಸಮ್ಮೇಳನದ ಆಯೋಜನಾ ಕಾರ್ಯದರ್ಶಿ ಹಾಗೂ ಡೀನ್ (ಸ್ನಾತಕೋತ್ತರ) ಡಾ. ಗುರುರಾಜ ಸುಂಕದ, ಡಾ. ಮಹಾದೇವಸ್ವಾಮಿ ಸೇರಿದಂತೆ ಇತರರು ಇದ್ದರು.

# ಉತ್ತಮ ಆರೋಗ್ಯಕ್ಕೆ ಆಯುರ್ವೇದ ಪೂರಕ: ನರಸಮ್ಮ ಮಾಡಗಿರಿ

ಬಾಹೀರವಾ ಗಿದ್ದು, ಅದರಡಿ ಕೆಲ ವೈದ್ಯರಿಗೆ ದಂಡ ವಿಧಿಸಲಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯಶನ್ ಅಧ್ಯಕ್ಷ ಡಾ.ದೇಶಪಾಂಡೆ ಅವರು ಮಾತನಾಡಿ, ಮನುಷ್ಯನು ತನ್ನ ದಿನನಿತ್ಯದ ಜೀವನದಲ್ಲಿ ದೈಹಿಕ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಸರಿಯಾಗಿ ಪಾಲಿಸಿದರೆ ತುಂಬಾ ವರ್ಷಗಳ ಕಾಲ ಬದುಕುಳಿಯಲು ಸಹಾಯಕವಾಗುತ್ತದೆ ಎಂದು ಹೇಳಿದರು.

ಡಾ.ಕಣಕಾಲಕ್ಷ್ಮಿ, ಡಾ.ನವೀನ್ ಹಾಗೂ ಡಾ.ಪೂಜಾ ಅವರು ಧನ್ವಂತರಿ ಮಂತ್ರದ ಪ್ರಾರ್ಥನಾ ಗೀತೆ ಹೇಳಿದರು.

ಈ ವೇಳೆ ಹಿರಿಯ ವೈದ್ಯಾಧಿಕಾರಿಗಳು, ಜಿಲ್ಲಾ ಸರಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷರಾದ ಡಾ.ಶಂಕರಗೌಡ ಪಾಟೀಲ್, ಜಿಲ್ಲಾ ಆಯುಷ್ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರಾದ ಆಮದರ್ ಷರೀಫ್ ಹಾಗೂ ಸಿಬ್ಬಂದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


# ಅರೇ ಕಾನೂನು ಸ್ವಯಂ ಸೇವಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಸದವಕಾಶ

ಹಳ್ಳಿಗಳಲ್ಲಿ ಬಾಲ್ಯ ವಿವಾಹ ತಡೆಯುವ ಕಾರ್ಯ ಮಾಡಬೇಕಿದೆ. ಸಣ್ಣಪುಟ್ಟ ಕೌಟುಂಬಿಕ ಕಲಹ, ವಿಚಾರಕ್ಕೆ ಪೊಲೀಸ್, ಕೋರ್ಟ್ ಕಚೇರಿಯ ಮೆಟ್ಟಿಲೇರದೆ, ಇಬ್ಬರು ಸಮಕ್ಷಮ ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ.

ಇಟ್ಟಂಗಿ ಭಟ್ಟಿ, ಅಗರಬತ್ತಿ ತಯಾರಿಕೆ ಕಾರ್ಖಾನೆ, ಹೋಟೆಲ್ ಸೇರಿದಂತೆ ಇತರೆ ಕಡೆಗಳಲ್ಲಿ ಕಂಡು ಬರುವ ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿ ಮುಖ್ಯವಾಹಿನಿಗೆ ತರಬೇಕಿದೆ. ಈ ಎಲ್ಲ ಕಾರ್ಯ ಮಾಡಲು ಆಸಕ್ತರು ಸ್ವಯಂ ಇಚ್ಛೆಯಿಂದ ಅರೇ ಕಾನೂನು ಸ್ವಯಂ ಸೇವಕರ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಆನಲೈನ್ ಸಭೆಯಲ್ಲಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್, ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಬೆಂಗಳೂರು ಕಚೇರಿಯ ಶ್ರೀಧರ್, ಬಾಲಸುಬ್ರಹ್ಮಣ್ಯಂ ಹಾಗೂ ಇನ್ನಿತರರು ಇದ್ದರು.

# ಸಮೀಕ್ಷೆ ಯಶಸ್ವಿಗೆ ವಿಕಲಚೇತನರ ಸಹಕಾರ ಅಗತ್ಯ : ಶಿವಕುಮಾರ್ ಚಲ್ಮಲ್



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.23–** ಕರ್ನಾಟಕ ರಾಜ್ಯ ಹಿಂದು ಳಿದ ವರ್ಗಗಳ ಆಯೋಗವು ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ರಾಜ್ಯದಾ ದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಯನ್ನು ಕೈಗೆತ್ತಿಕೊಂಡಿದ್ದು, ವಿಕಲಚೇತನರ ಸ್ಥಿತಿಗತಿ, ಹಕ್ಕುಗಳು ಹಾಗೂ ಅಗತ್ಯಗಳ ಕುರಿತು ನಿಖರ ಮಾಹಿತಿಯನ್ನು ಸಂಗ್ರಹಿಸ ಲು ಉದ್ದೇಶಿಸಿದೆ. ವಿಕಲಚೇತನರು ಸಮೀಕ್ಷೆಗೆ ಸಂಪೂರ್ಣ ಸಹಕಾರ ನೀಡಬೇಕೆಂದು ಸಂಕಲ್ಪ ವಿಕಲಚೇತನ ಸಂಘದ ಅಧ್ಯಕ್ಷ ಶಿವಕುಮಾರ್ ಚಲ್ಮಲ್ ಕರೆ ನೀಡಿದ್ದಾರೆ.ಸಮೀಕ್ಷೆದಾರರು ಮನೆಗೆ ಬಂದಾಗ ವಿಕಲಚೇತನರು ಮತ್ತು ಅವರ ಪೋಷಕರು ಮುಂಚಿತವಾಗಿ ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿಕೊಂಡಿರಬೇಕು. ಯು.ಡಿ.ಐ.ಡಿ ಕಾರ್ಡ್/ಸಂಖ್ಯೆ, ಅಂಗವಿಕಲತಾ ಪ್ರಮಾಣಪತ್ರ, ಆಧಾರ್ ಕಾರ್ಡ್, ವಿದ್ಯಾಭ್ಯಾಸದ ದಾಖಲೆಗಳು, ವೃತ್ತಿ ಸಂಬಂಧಿತ ದಾಖಲೆಗಳು ಮತ್ತು ಬಳಕೆಯಲ್ಲಿರುವ ಸಹಾಯಕ ಸಾಧನಗಳ ವಿವರಗಳ ಜೆರಾಕ್ಸ್ ಪ್ರತಿಗಳನ್ನು ಇಟ್ಟುಕೊಳ್ಳುವುದು ಅವಶ್ಯಕ. ಮೂಲ ದಾಖಲೆಗಳನ್ನು ನೀಡುವ ಬದಲು ಜೆರಾಕ್ಸ್ ಪ್ರತಿಗಳನ್ನು ಮಾತ್ರ ಕೊಡಬೇಕು.

ಇದಲ್ಲದೆ, ದಿನನಿತ್ಯದ ಚಟುವಟಿಕೆಗಳನ್ನು ನಡೆಸಲು ಆರೈಕೆದಾರರ ಸಹಾಯ ಅಗತ್ಯವಿದೆಯೇ ಎಂಬ ಮಾಹಿತಿ ಹಾಗೂ ತಮ್ಮ ಅಂಗವಿಕಲತೆಯ ವಿಧದ ವಿವರಗಳನ್ನು ನೀಡುವುದು ಕಡ್ಡಾಯವಾಗಿದೆ.ಪ್ರತಿಯೊಬ್ಬ ವಿಕಲಚೇತನರು ನಿಖರ ಮಾಹಿತಿಯನ್ನು ನೀಡಿದಲ್ಲಿ, ಭವಿಷ್ಯದ ಸರ್ಕಾರಿ ಯೋಜನೆಗಳು ಮತ್ತು ಸೌಲಭ್ಯಗಳನ್ನು ವಿಕಲಚೇತನರ ಹಿತಾಸಕ್ತಿಗೆ ಅನುಗುಣವಾಗಿ ರೂಪಿಸಲು ಇದು ಆಧಾರವಾಗುತ್ತದೆ. ಆದ್ದರಿಂದ ಸಮೀಕ್ಷೆಗೆ ಪ್ರತಿಯೊಬ್ಬರೂ ಸಂಪೂರ್ಣ ಸಹಕಾರ ನೀಡಬೇಕು" ಎಂದು ತಿಳಿಸಿದ್ದಾರೆ.

# ಚುಳಕಿ ನಾಲಾ ಜಲಾಶಯ ಅಭಿವೃದ್ದಿಗೆ 175 ಕೋಟಿರೂ.ಗಳ ಯೋಜನೆ:ಸಚಿವ ಈಶ್ವರ ಬಿ.ಖಂಡ್ರೆ



**ಬೀದರ, ಸೆ.23–** ಈ ಭಾಗದ ರೈತರ ಜಮೀನುಗಳಿಗೆ ನೀರುಣಿಸಲು ಚುಳಕಿ ನಾಲಾ ಜಲಾಶಯ ಅಭಿವೃದ್ದಿಗೆ 175 ಕೋಟಿ ರೂಪಾಯಿಗಳ ಡಿ.ಪಿ.ಆರ್. ವರದಿ ಸಿದ್ಧಪಡಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ಸೋಮವಾರ ಹಲಸೂರು ತಾಲೂಕಿನ ಚುಳಕಿ ನಾಲಾ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಅವರು ಮಾತನಾಡಿದರು.

ಈ ಜಲಾಶಯವು ಸ್ಥಳೀಯ ರೈತರ ಆಶಾಕಿರಣವಾಗಿದ್ದು, ಸಮರ್ಪಕವಾಗಿ ನೀರು ಸಂಗ್ರಹವಾದರೆ ಶೇ.70ಕ್ಕೂ ಹೆಚ್ಚು ಕೃಷಿಭೂಮಿಗೆ ನೀರಾವರಿ ಸಿಗುವ ಸಾಧ್ಯತೆ ಇದೆ. ಆದರೆ ಹುಳು ತುಂಬಿ ಹಾಗೂ ಕಾಲುವೆಗಳ ನವೀಕರಣದ ಅಭಾವದಿಂದಾಗಿ ಇದು ಬರಿ ಬಸವಕಲ್ಯಾಣ ನಗರಕ್ಕೆ ಕುಡಿಯುವ ನೀರು ಪೂರೈಕೆಗೆ ಮಾತ್ರ ಸೀಮಿತವಾಗಿದೆ. ಪುನ ಶ್ಚೇತನ ಮಾಡಿದರೆ ರೈತರಿಗೆ ದೊಡ್ಡ ಸಹಾಯವಾಗಲಿದೆ ಎಂದು ಸಚಿವರು ತಿಳಿಸಿದರು.

ಜಲಾಶಯದ ಸುತ್ತಮುತ್ತಲಿನ ಹಾನಿಗೊಳಗಾದ ಬೆಳೆಗಳನ್ನು ಸಮೀಕ್ಷೆ ಮಾಡಿ ಸೂಕ್ತ ಪರಿಹಾರ ನೀಡುವಂತೆ ಕಂದಾಯ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಲಾಶಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಗತ್ಯವಿದ್ದು, ಸೈರನ್ ವ್ಯವಸ್ಥೆ ಹಾಗೂ ಗೇಟುಗಳ ಪುನರ್‌ಚೇತನ ಕೂಡ ತಕ್ಷಣ ಮಾಡಲಾಗುವುದು ಎಂದು ಅವರು ತಿಳಿಸಿದರು.

10 ಸಾವಿರ ಎಕರೆ ಜಮೀನುಗಳಿಗೆ ನೀರಾವರಿ ಸಾಧ್ಯತೆ: ಚುಳಕಿ ನಾಲಾ ಜಲಾಶಯ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡರೆ ಸುತ್ತಮುತ್ತಲಿನ 10 ಸಾವಿರ ಎಕರೆ ಕೃಷಿ ಜಮೀನುಗಳಿಗೆ ನೀರಾವರಿ ಸಾದ್ಯವಾಗಲಿದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಸವಕಲ್ಯಾಣ ಸಹಾಯಕ ಆಯುಕ್ತರು ಮುಕುಲ್ ಜೈನ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ದೇವಿಕಾ, ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತ 'ರ ಸಂತೋಷ ಮಾಕಾ, ತಹಶೀಲ್ದಾರ್ ಶಿವಾನಂದ್ ಮೇತ್ರೆ ಸೇರಿದಂತೆ ಅನೇಕ ಅಧಿಕಾರಿಗಳು ಉಪಸ್ಥಿತರಿದ್ದರು.

# ಗಂಗಾಮತಸ್ಥ ಸಮುದಾಯ ಭವನಕ್ಕೆ ಅನುದಾನ ನೀಡಿ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.23–** ಪಟ್ಟಣದಲ್ಲಿ ಗಂಗಾಮತಸ್ಥ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ 50 ಲಕ್ಷ ರೂಪಾಯಿ ಅನುದಾನ ಕೊಡಿ ಎಂದು ಗಂಗಾಮತಸ್ಥ ಸಮಾಜದ ಪದಾಧಿಕಾರಿಗಳು ಶಾಸಕ ಮಾನಪ್ಪ ವಜ್ಜಲ್ ರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.


ಪುರಸಭೆ ವ್ಯಾಪ್ತಿಯಲ್ಲಿ 100*100 ವಿಸ್ತೀರ್ಣದ ನಿವೇಶನವಿದ್ದು, ಅದರಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಬೇಕು. ತಾಲೂಕಿನಲ್ಲಿ ಸುಮಾರು 15 ಸಾವಿರ ಜನಸಂಖ್ಯೆ ಇದ್ದು, ನಿತ್ಯ ಕಾರ್ಯ ನಿಮಿತ್ಯ ಸಮಾಜ ಬಾಂಧವರು ಪಟ್ಟಣಕ್ಕೆ ಆಗಮಿಸುತ್ತಾರೆ. ಅಲ್ಲದೇ ತಾಲೂಕು ಕೇಂದ್ರದಲ್ಲಿ ಸಮಾಜದ ಸಭೆ, ಸಮಾರಂಭ ನಡೆಸಲು ಅನಾನುಕೂ ಲವಾಗುತ್ತಿದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಚಿಕವಾಗಿ ಹಿಂದುಳಿದ ಸಮಾಜವನ್ನು ಪರಿಗಣಿಸಿ ಈಗಾಗಲೇ 5 ಲಕ್ಷ ರೂಪಾಯಿ ಕೊಟ್ಟು ಬುನಾದಿ ಹಂತದ ಕಾಮಗಾರಿ ಪೂರ್ತಿಸಲು ಸಹಕರಿಸಿದ್ದೀರಿ. ಮುಂದುವರೆದು ಕಟ್ಟಡ ಕಾಮಗಾರಿಗೆ ಅಗತ್ಯ ಅನುದಾನ ನೀಡಿ, ಭನವ ನಿರ್ಮಾಣ ಮಾಡಿಕೊಡಿ. ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ಅಮರೇಶ ಕಲ್ಲೂರು, ಮುಖಂಡರಾದ ಮಂಜುನಾಥ ಕರಡಕಲ್, ಹೆಚ್.ರಾಮುಲು, ಬಲಭೀಮ ಹೊಳೆಯಪ್ಪ ಮೌನೇಶ, ಶಿವಪ್ಪ, ಹುಲುಗಪ್ಪ, ರಂಗಣ್ಣ, ಅಮರೇಶ ಸೇರಿ ಇತರರು ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111 9743496111

# ಬಾನು ಮುಷ್ತಾಕ ಅವರ ' ಎದೆಯ ಹಣತೆ 'ಯಲ್ಲಿದಮನಿತ ಮಹಿಳೆಯರ ಸಂಕಟದ ದನಿ –ಗೊರವರ



**ಬಳ್ಳಾರಿ ಸೆ,23–**ಬಂಡಾಯ ಚಳವಳಿಯ ಪ್ರಮುಖ ಲೇಖಕಿಯಾಗಿರುವ ಬಾನು ಮುಷ್ತಾಕ ಅವರ ಸಾಹಿತ್ಯದಲ್ಲಿ

ದಮನಿತ ಮಹಿಳೆಯರ ಸಂಕಟದ ದನಿ ಆರ್ದ್ರವಾಗಿ ತೆರೆದುಕೊಂಡಿದೆ ಎಂದು ಲೇಖಕ ಡಾ.ಟಿ.ಎಸ್ ಗೊರವರ ನುಡಿದರು.

ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ವಿಭಾಗದಿಂದ ಆಯೋಜಿಸಿದ್ದ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ ಅವರ ಕಥಾಸಂಕಲನ 'ಎದೆಯ ಹಣತೆ –ಕೆಲವು ಗ್ರಹಿಕೆಗಳು ' ಎನ್ನುವ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಲೇಖಕಿ ಮಹಿಳೆಯರ ಸ್ಥಿತಿಗತಿ,ಆಂತರ್ಯವನ್ನು ಬೇರೆ ಬೇರೆ ಪಾತ್ರ, ಪರಿಸರ,ಸನ್ನಿವೇಶಗಳ ಮೂಲಕ ರೂಪಕ ನಿಷ್ಕವಾಗಿ ನೋಡಿದ್ದಾರೆ. ಸುಡುವ ಸತ್ಯಗಳನ್ನು ಕಲಾತ್ಮಕವಾಗಿ ಕಥೆಗಳಲ್ಲಿ ಕಟ್ಟಿಕೊಟ್ಟಿರುವ ಅವರು ಪುರುಷ ಸಮಾಜದ ಕಟ್ಟುಪಾಡುಗಳಿಗೆ ಸೂಕ್ಷ್ಮವಾಗಿ ಪ್ರತಿರೋಧ ಒಡ್ಡಿದ್ದಾರೆ ಎಂದು ವಿಶ್ಲೇಷಿಸಿದರು.

ಅವರ ಶಕ್ತಿ ಮತ್ತು ಸಾಮರ್ಥ್ಯ ಕಲ್ಪನೆಗೆ ಎಡೆ ಮಾಡಿಕೊಡದೆ ವಾಸ್ತವದ ಕಟು ಸಂಗತಿಗಳನ್ನು ಮುನ್ನೆಲೆಗೆ ತಂದಿರುವುದು ಕಥೆಗಳ ಹೆಚ್ಚುಗಾರಿಕೆಯಾಗಿದೆ. ಬಾನು ಬೂಕರ್ ಮೂಲಕ ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ಜಿ.ಪ್ರಹ್ಲಾದ ಚೌದ್ರಿ ವಹಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ವಿಭಾಗದ ಮುಖ್ಯಸ್ಥರಾದ ದಸ್ತಗೀರಸಾಬ್ ದಿನ್ನಿ ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ, ಪುಸ್ತಕ ಪ್ರೀತಿ, ಹೊಸ ಆಲೋಚನಾ ಕ್ರಮವನ್ನು ವಿಸ್ತರಿಸಲು ಸಹಕಾರಿಯಾಗುತ್ತವೆ ಎಂದರು.

ವೇದಿಕೆಯ ಮೇಲೆ ಸಹಾಯಕ ಪ್ರಾಧ್ಯಾಪಕರಾದ ಪ್ರವೀಣ್ ಕುಮಾರ್ ಇದ್ದರು. ಈ ಸಂದರ್ಭದಲ್ಲಿ ವೈದ್ಯರಾದ ಡಾ.ಪರಸಪ್ಪ ಬಂಡಾರಕಲ್ಲಿ, ಡಾ.ದಿವ್ಯಾ ಎನ್, ಡಾ.ಸುಮಾ ಗುಡಿ, ಲೇಖಕರಾದ ಮಲ್ಲಿಕಾರ್ಜುನ ಸ್ವಾಮಿ, ಡಾ. ಶಿವಲಿಂಗಪ್ಪ ಹಂದಿಹಾಳು, ವೀರೇಂದ್ರ ರಾವಿಹಾಳ, ಆಶಾರೆಡ್ಡಿ ಉಪಸ್ಥಿತರಿದ್ದರು.

# ಈಜು ಸ್ಪರ್ಧೆ: ಎಸ್‌ಆರ್‌ಎನ್ ಮೆಹತಾ ಶಾಲೆ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ




**ಕಲಬುರಗಿ,ಸೆ.23–**ಸಾರ್ವಜನಿಕ ಶಿಕ್ಷಣ ಇಲಾಖೆ ಆಯೋಜಿಸಿದ ಜಿಲ್ಲಾ ಮಟ್ಟದ ನೇರ ಆಯ್ಕೆಯ ಈಜು ಸ್ಪರ್ಧೆಯಲ್ಲಿ ನಗರದ ಎಸ್.ಆರ್.ಎನ್ ಮೆಹತಾ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

17 ವರ್ಷದ ಒಳಗಿನ ಬಾಲಕಿಯರ ಈಜು ಸ್ಪರ್ಧೆಯಲ್ಲಿ ರಶ್ಮಿ ವೀರಣ್ಣಾ ಬೇಲೂರೆ 100 ಮೀಟರ್ ಫ್ರೀ ಸ್ಟೈಲ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ,200 ಮೀಟರ್ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ,200 ಮೀಟರ್ ಇಂಡಿವಿಜುವಲ್ ಮಿಡ್ಲೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ,14 ವರ್ಷದ ಒಳಗಿನ ಬಾಲಕರ ಈಜು ಸ್ಪರ್ಧೆಯಲ್ಲಿ ಪ್ರೇಮಕುಮಾರ ಎಸ್. ಪಾಟೀಲ,50 ಮೀಟರ್ ಫ್ರೀ ಸ್ಟೈಲ ಸ್ಪರ್ಧೆಯಲ್ಲಿ ದ್ವಿತಿಯ ಸ್ಥಾನ

50 ಮೀಟರ್ ಬಟರ್ ಫ್ಲೈ ಸ್ಪರ್ಧೆಯಲ್ಲಿ ದ್ವಿತಿಯ ಸ್ಥಾನ,14 ವರ್ಷದ ಒಳಗಿನ ಬಾಲಕರ ಈಜು ಸ್ಪರ್ಧೆಯಲ್ಲಿ ವಿವೇಕ ಎಸ್. ಹರಳಯ್ಯಾ,50 ಮೀಟರ್ ಬಟರ್ ಫ್ಲೈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 50 ಮೀಟರ್ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ,100 ಮೀಟರ್ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ದ್ವಿತಿಯ ಸ್ಥಾನ,17 ವರ್ಷದ ಒಳಗಿನ ಬಾಲಕರ ಈಜು ಸ್ಪರ್ಧೆಯಲ್ಲಿ ಪ್ರೇಮ ಶರಣಪ್ಪಾ

50 ಮೀಟರ್ ಫ್ರೀ ಸ್ಟೈಲ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ,200 ಮೀಟರ್ ಫ್ರೀ ಸ್ಟೈಲ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆಯುವುದರ ಮೂಲಕ ಮೈಸೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಕ್ರೀಡಾ ಕೂಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಆಡಳಿತ ಮಂಡಳಿಯ ಟ್ರಸ್ಟಿಗಳಾದ ಚಕೋರ ಮೆಹತಾ, ಪ್ರಾಚಾರ್ಯರಾದ ಪ್ರೀತಿ ಮೆಹತಾ, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಬಸವರಾಜ ತಳಕೇರಿ ಹಾಗೂ ಶಿಕ್ಷಕ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಕಲ್ಯಾಣ ಕರ್ನಾಟಕ ಹೋರಾಟಗಾರರ ತ್ಯಾಗ ಸ್ಮರಣೆ ಅಗತ್ಯ :ಸಚಿವ ಈಶ್ವರ್ ಖಂಡ್ರೆ



**ಬೀದರ್ ,ಸೆ.23–** ದೂರವಾಣಿ ಮೂಲಕ ಕಾರ್ಯಕ್ರಮಕ್ಕೆ ಶುಭ ಹಾರೈಸಿದ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಬಿ. ಖಂಡ್ರೆ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ನಿರ್ಮಾಣಕ್ಕಾಗಿ ಈ ಭಾಗದ ಅನೇಕರು ಹೋರಾಟ ನಡೆಸಿದ್ದಾರೆ. ಅವರ ತ್ಯಾಗ ಮತ್ತು ಸಮರ್ಪಣೆಯನ್ನು ನಾವು ಪ್ರತಿದಿನ ಸ್ಮರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಅವರು ಇತ್ತಿಚೆಗೆ ಬೀದರ ನಗರದ ಪರಮ ಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರ ಜಿಲ್ಲಾ ರಂಗಮಂದಿರದಲ್ಲಿ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆ ವತಿಯಿಂದ ಏರ್ಪಡಿಸಿದ ಸಂಸ್ಥಾಪನಾ ದಿನಾಚರಣೆ ಮತ್ತು ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ 11 ಜನ ಸಾಧಕರಿಗೆ ಸನ್ಮಾನ ಮತ್ತು ಸೇನೆ ಬಲಪಡಿಸಲು ಕಾರ್ಯಕರ್ತರ ಬೃಹತ್ ಸಮಾವೇಶ ಕುರಿತು ಮಾತನಾಡಿದರು.

ಅವರು ಪ್ರಾಂತ್ಯವಾರು ಅಸಮತೋಲನದ ಸಮಸ್ಯೆಗಳು ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಕಲ್ಯಾಣ ಕರ್ನಾಟಕದ ಜನತೆಗೆ ನ್ಯಾಯ ದೊರಕಲು ನಾವು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು. ಸಮಾನ ಅವಕಾಶ, ಸಮಾನ ಸೌಕರ್ಯ ಹಾಗೂ ಸಮಗ್ರ ಅಭಿವೃದ್ಧಿ ಇವುಗಳೇ ನಮ್ಮ ಮುಖ್ಯ ಗುರಿಯಾಗಬೇಕು ಎಂದು ಹೇಳಿದರು.

ಸಚಿವ ಖಂಡ್ರೆ ಅವರು ಕಾರ್ಯಕ್ರಮ ಆಯೋಜಕರಿಗೆ ಧನ್ಯವಾದ ತಿಳಿಸಿ, ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆಯ ಹೋರಾಟದ ದಾರಿಯಲ್ಲಿ ಸರ್ಕಾರ ಸದಾ ಕೈಜೋಡಿಸಲು ಸಿದ್ಧವಿದೆ ಎಂದು ಭರವಸೆ ನೀಡಿದರು.

ಔದತಪುರ ಮಠದ ಪರಮ ಪೂಜ್ಯ ಶ್ರೀ ಶಿವಯೋಗಿ ಮಚೆಂದ್ರನಾಥ ಮಹಾರಾಜರು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಕಲ್ಯಾಣ ಕರ್ನಾಟಕದ ಜನರ ಶಕ್ತಿ ಅಪಾರವಾಗಿದೆ. ಈ ಶಕ್ತಿಯನ್ನು ನಾವು ಒಗ್ಗಟ್ಟಿನಿಂದ ಸಮಾಜ ಹಿತಕ್ಕಾಗಿ ಬಳಸಿದಾಗ ನಿಜವಾದ ನ್ಯಾಯ ದೊರಕುತ್ತದೆ. ಹೋರಾಟಗಾರರಿಗೆ ಆಧ್ಯಾತ್ಮಿಕ ಪ್ರೇರಣೆ ಅವಶ್ಯಕ. ಭಕ್ತಿ ಮತ್ತು ಶಕ್ತಿ ಇವೆರಡೂ ಸೇರಿದಾಗ ಮಾತ್ರ ಪ್ರಗತಿಯ ಬಾಗಿಲು ತೆರೆಯುತ್ತದೆ ಎಂದು ಹೇಳಿದರು.

ಉತ್ತರ ಕರ್ನಾಟಕ ದಿನ ಪತ್ರಿಕೆ ಸಂಪಾದಕರಾದ ಶಿವಶರಣಪ್ಪಾ ವಾಲಿ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದವರು ಯಾವಾಗಲೂ ಪ್ರತಿಯೊಂದು ರಂಗದಲ್ಲಿ ಮುಂಚೂಣಿಂಯಲ್ಲಿದ್ದಾರೆ. ವಿಶೇಷವಾಗಿ ಕಲೆ, ಸಾಹಿತ್ಯ, ವಿಜ್ಞಾನ, ಸಂಸ್ಕೃತಿ ಮತ್ತು ಸಮಾಜ ಸೇವೆಯ ಕ್ಷೇತ್ರಗಳಲ್ಲಿ ನಮ್ಮ ಭಾಗದ ಪ್ರತಿಭೆಗಳು ದೇಶದ ಮಟ್ಟದಲ್ಲಿ ಗುರುತಿಸಿಕೊಂಡಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಲ್ಯಾಣ ಕರ್ನಾಟಕ ನಿರ್ಮಾಣ ಸೇನೆಯ ಸಂಸ್ಥಾಪಕ ಅಧ್ಯಕ್ಷರಾದ ಸ್ವಾಮಿದಾಸ್ ಕೆಂಪೆನೋರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ ಚಿಂತನೆಗೆ ನಾವೆಲ್ಲರೂ ನಿರಂತರ ಹೋರಾಟದ ಹಾದಿ ತುಳಿಯಲೇಬೇಕು. ನ್ಯಾಯ ದೊರಕಿಸಲು ಏಕತಾ ಶಕ್ತಿ ಹಾಗೂ ಸಂಘಟಿತ ಹೋರಾಟವೇ ಶ್ರೇಷ್ಠ ಮಾರ್ಗ ಎಂದು ಒತ್ತಾಯಿಸಿದರು.

ಬೆಳಿಗ್ಗೆ ಅಂಬೇಡ್ಕರ್ ಸರ್ಕಲ್‌ನಲ್ಲಿ ತೆರೆದ ವಾಹನದಲ್ಲಿ ಸರ್ದಾರ ವಲ್ಲಾಭಾಯ್ ಪಟೇಲ್ ಅವರ ಭಾವಚಿತ್ರದ ಮೆರವಣಿಗೆಗೆ ಪರಮ ಪೂಜ್ಯ ಶ್ರೀ ಹವಾ ಮಲ್ಲಿನಾಥ್ ಮಹಾರಾಜರು ಚಾಲನೆ ನೀಡಿದರು. ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಅಮೃತರಾವ್ ಚಿಮಕೋಡೆ, ಬಂಟಿದರಬಾರೆ, ಪಪ್ಪು ಪಾಟೀಲ್ ಮತ್ತಿತರರು ಭಾಗವಹಿಸಿದರು.


ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ ನ್ಯಾಯವಾದಿ, ಅಶೋಕ್ ಮಾನುರೆ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ರಾಜ್ಯವು ಪ್ರತಿಯೊಂದು ರಾಜ್ಯದ ಕೂಗಿನಂತೆ, ಹೋರಾಟಗಾರರ ತ್ಯಾಗ, ಜನರ ಆಕಾಂಕ್ಷೆ ಮತ್ತು ಅಭಿವೃದ್ಧಿಯ ಬಯಕೆಯ ಪ್ರತೀಕವಾಗಿದೆ. ಇಲ್ಲಿ ಇರುವ ಜನರ ಸಮಸ್ಯೆ ನಿವಾರಣೆಗೆ, ಶಿಕ್ಷಣ, ಉದ್ಯೋಗ ಹಾಗೂ ಮೂಲಸೌಕರ್ಯಗಳ ಸುಧಾರಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ರಾಜ್ಯದ ಪ್ರತಿಯೊಂದು ಕೂಗು ಸರ್ಕಾರದ ಕಿವಿಗೆ ತಲುಪಬೇಕು. ಆಗ ಮಾತ್ರ ಈ ಭಾಗದ ನಿಜವಾದ ಅಭಿವೃದ್ಧಿ ಸಾಧ್ಯ ಎಂದರು.

ಅದೇ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ, ಶ್ರಮ ಮತ್ತು ಸೇವಾ ಮನೋಭಾವದಿಂದ ಸಾಧನೆ ಮಾಡಿ ಹೆಸರನ್ನು ಗಳಿಸಿರುವ 11 ಮಂದಿಗೆ ವಿಶೇಷವಾಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಫಾಳೆಪ್ಪಾ ಅಂತಿ ಸ್ವಾಗತಿಸಿದರು, ನಾಗಪ್ಪ ಜಾಣಕನೋರ್ ನಿರೂಪಿಸಿದರು, ಸಂಗಮೇಶ ಏಣಕೂರ್ ವಂದಿಸಿದರು.

ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಸೋಮಶೇಖರ್ ಬಿರಾದರ್, ಕುರಿ ಉಣ್ಣೆ ಅಭಿವೃದ್ಧಿ ನಿಮಗದ ಮಾಜಿ ಅಧ್ಯಕ್ಷರಾದ ಪಂಡಿತ್ ಚಿದ್ರಿ, ನ್ಯಾಯವಾದಿ ಗೌತಮ್ ವಾಗರಾಜ್, ಯುವ ಮುಖಂಡರಾದ ಆದೀಶ್ ವಾಲಿ, ಸಾಬಣ್ಣಾ ಜಮಾದಾರ್, ಜೇಮ್ಸ್ ಇಸ್ಲಾಂಪೂರ್, ಪ್ರಕಾಶ ಹಳ್ಳಿಖೇಡ್, ನೀಲಕಂಠ ಭೆಂಡೆ, ಸಂಗಪ್ಪಾ, ಧನರಾಜ ಬೆಮಳಖೇಡಾ, ಮಾರುತಿ ಬಂಗಾರೆ, ಸಚೀನ್ ಮಲ್ಕಾಪೂರೆ, ಸುನೀಲ ಭಾವಿಕಟ್ಟಿ ವೇದಿಕೆ ಮೇಲೆ ಇದ್ದರು. ಜೇಮ್ಸ್ ಕುಡ್ತೆ, ವಿಲ್ಸನ್ ಕುಡ್ತರನೋರ್, ಸೇರಿದಂತೆ ಸೇನೆಯ ಪದಾಧಿಕಾರಿಗಳು ಕನ್ನಡಾಭಿಮಾನಿಗಳು ಇತರರು ಇದ್ದರು.

# ಪುರಾಣ ಪ್ರವಚನದಿಂದ ಮುಕ್ತಿ:ಸಿದ್ದಲಿಂಗ ಶ್ರೀ



**ಯಡ್ರಾಮಿ,ಸೆ.23–**ಪುರಾಣ ಪ್ರವಚನದಿಂದ ಮುಕ್ತಿ ಜೋತೆಗೆ ಬದುಕನ್ನು ರೂಪಿಸಲು ಪುರಾಣ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪೂಜ್ಯ ಸಿದ್ದಲಿಂಗ ಮಹಾಸ್ವಾಮಿಗಳು ವಿರಕ್ತಮಹಾಮಠ ಯಡ್ರಾಮಿ ಅವರು ವ್ಯಕ್ತಪಡಿಸಿದರು.

ಪಟ್ಟಣದ ದೇಸಾಯಿ ಕಾಲೋನಿಯಲ್ಲಿ ಶ್ರೀ ಅಂಬಾಭವಾನಿ ದೇವಸ್ಥಾನ ಟ್ರಸ್ಟ್ ಕಮೀಟಿ ವತಿಯಿಂದ ಶ್ರೀ ದೇವಿ ಮಹಾತ್ಮೆ ಪುರಾಣ ಹಾಗೂ ನವರಾತ್ರ್ಯೋತ್ಸವ ಕಾರ್ಯಕ್ರಮದ ಸಾನಿದ್ಯವಹಿಸಿ ಮಾತನಾಡಿದ ಶ್ರೀಗಳು.ಸಾಮಾಜದಲ್ಲಿ ಮಾನವನು ಮಾನವನ್ನಾಗಿ ಜೀವನ ರೂಪಿಸಲು ಇತಿಹಾಸದ ಜ್ಞಾನ ಅಗತ್ಯ ಆಗಿದ್ದು ಅಂತಹ ಜ್ಞಾನ ದೊರೆಯಬೇಕು ಅಂದ್ರೆ ಪುರಾಣದಿಂದ ಮಾತ್ರ ಸಾದ್ಯವಾಗುವುದು.

ಅಂತಹ ಪುರಾಣ ನನ್ನ ಗ್ರಾಮ ಮತ್ತು ನಮ್ಮ ಪಟ್ಟಣದ ದೇಸಾಯಿ ಕಾಲೋನಿಯಲ್ಲಿ ಹಮ್ಮಿಕೊಂಡು ನಮ್ಮ ನೀಮ್ಮ ಸೌಭಾಗ್ಯವಾಗಿದ್ದು. ದೇವಿಯ ಪುರಾಣದಲ್ಲಿ ಬರುವಂತ ಕಾರ್ಯಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ದೇವಿಯ ಮಹಿಮೆ ಹಾಗೂ ಚರಿತ್ರೆ ತಿಳಿಯಲು ಈ ಧಾರ್ಮಿಕ ಕಾರ್ಯ ಕೈಗೊಂಡಿದ್ದು ಪುರಾಣದ ಪ್ರಯೋಜನ ತಾವುಗಳೆಲ್ಲರೂ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ದೇವಿ ಮಹಾತ್ಮೆ ಪುರಾಣವನ್ನು ವೇ.ಮೂ.ಶಿವಲಿಂಗ ಶಾಸ್ತ್ರೀ ಪುರಾಣಿಕಮಠ ಗರೂರ ಅವರು ಪುರಾಣ ಮಂಗಲ ಪ್ರಾರಂಭ ಮಾಡಿದರು.ಪುರಾಣ 11 ದಿನಗಳ ಕಾಲ ಮುಂದುವರಿಯುವುದು ಎಂದು ತಿಳಿಸಿದರು.

ಪುರಾಣ ಕಾರ್ಯಕ್ರಮದಲ್ಲಿ ಸಂಗೀತ ಗಾಯಕರಾಗಿ ವೀರಭದ್ರಯ ಸ್ವಾಮಿ ತಬಲಾವಾದಕರಾಗಿ ರಮೇಶ ಕಟ್ಟಿಸಂಗಾವಿ ಅವರು ನೇರವೆರುಸುವರು ಪ್ರತಿಯೊಬ್ಬರು ಪುರಾಣ ಆಲಿಸಿ ಪುನೀತರಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೀರಣ್ಣ ದೇಸಾಯಿ ಅಂಬಾಭವಾನಿ ದೇವಸ್ಥಾನಕ್ಕೆ ಭೂ ಧಾನಿಗಳು ಯಡ್ರಾಮಿ,ಸಿದ್ದನಗೌಡ ಮಾಲಿ ಪಾಟೀಲ ಯಡ್ರಾಮಿ, ಮಲ್ಲಾಕಾವ್ ಕುಲಕರ್ಣಿ, ವಿರೇಶ ಪೊಲೀಸ್ ಪಾಟೀಲ,ವಿಶ್ವನಾಥ ಮಾಗಣಗೇರಾ,ಬಸವರಾಜ ಉಪ್ಪಾರ ದೇವಸ್ಥಾನ ಕಮಿಟಿಯ ಸದಸ್ಯರು ಭಕ್ತಾಧಿಗಳು ಇದ್ದರು.

# ಜನ ಸಮೃದ್ಧಿ ಸಹಕಾರಿ: ರೂ. 23 ಲಕ್ಷ ಲಾಭ



**ಬೀದರ್,ಸೆ.23–** ಇಲ್ಲಿಯ ಜನ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ 2024–25ನೇ ಸಾಲಿನಲ್ಲಿ ರೂ. 23.21 ಲಕ್ಷ ಲಾಭ ಗಳಿಸಿದೆ.

ನಗರದ ಎಂ.ಎಸ್. ಪಾಟೀಲ ಫಂಕ್ಷನ್ ಹಾಲ್‌ನಲ್ಲಿ ಭಾನುವಾರ ನಡೆದ ಸಂಘದ ವಾರ್ಷಿಕ ಮಹಾ ಸಭೆಯಲ್ಲಿ ಸಂಘದ ಅಧ್ಯಕ್ಷೆ ಸಂತೋಷಿ ರಾಜೇಂದ್ರಕುಮಾರ ಗಂದಗೆ ಈ ವಿಷಯ ತಿಳಿಸಿದರು.

ಸಂಘದ ದುಡಿಯುವ ಬಂಡವಾಳ ರೂ. 4.96 ಕೋಟಿ ಆಗಿದೆ. ರೂ. 2.98 ಕೋಟಿ ಠೇವಣಿ ಹೊಂದಿದ್ದು, ಸಾಲ ಹಾಗೂ ಮುಂಗಡ ಮೊತ್ತ ರೂ. 3.98 ಕೋಟಿ ಇದೆ ಎಂದು ವಿವರಿಸಿದರು.

ಉದ್ಯಮಿ ವಿಜಯಕುಮಾರ ಪಾಟೀಲ ಖಾಜಾಪುರ ಉದ್ಘಾಟಿಸಿದರು. ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಪತ್ತಿನ ಸಹಕಾರಿ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಕಾರ್ಯ ನಿರ್ವಹಣಾಧಿಕಾರಿ ವೀರಕುಮಾರ ಹಲಬರ್ಗೆ ವಾರ್ಷಿಕ ವರದಿ ವಾಚಿಸಿದರು. ಅಷ್ಟೂರು ಪಿಕೆಪಿಎಸ್ ಅಧ್ಯಕ್ಷ ಶಿವಕುಮಾರ ಪಾಟೀಲ ಗುಮ್ಮಾ ಅವರನ್ನು ಸನ್ಮಾನಿಸಲಾಯಿತು.

ನಗರಸಭೆ ಸದಸ್ಯ ರಾಜಾರಾಮ ಚಿಟ್ಟಾ ಮುಖ್ಯ ಅತಿಥಿಯಾಗಿದ್ದರು. ಸಂಘದ ಉಪಾಧ್ಯಕ್ಷ ಶಿವಕುಮಾರ ಕೆ. ಪಾಟೀಲ, ನಿರ್ದೇಶಕರಾದ ಪಾಂಡುರಂಗ ಪಾಂಚಾಳ, ಕೀರ್ತಿ ಎಸ್. ರಾಮಶೆಟ್ಟಿ, ರಮೇಶ ರಂಜೇರಿ, ರಾಜಕುಮಾರ ಸೋನಾಳೆ, ಅಶೋಕ ಗಂಧೆ, ಶೈಲೇಂದ್ರಕುಮಾರ ಝುರೆಪ್ಪ, ಸಂತೋಷಕುಮಾರ ಕೆ. ಪಾಟೀಲ, ಭುವನೇಶ್ವರಿ ರಾಜಾರಾಮ, ಮಾಣಿಕಪ್ಪ ಕರ್ಪೂರ, ದಿಲೀಪ್ ಸಜ್ಜನಶೆಟ್ಟಿ, ಬಸವರಾಜ ಕೆ. ದುಕಾನದಾರ್, ಜಗದೇವಿ ಭಾವಿ, ರಾಣಿ ಕೆ. ಸತ್ಯಮೂರ್ತಿ ಇದ್ದರು.

ಕೆ.ಸತ್ಯಮೂರ್ತಿ ಸ್ವಾಗತಿಸಿದರು. ಸೂರ್ಯಕಾಂತ ರಾಮಶೆಟ್ಟಿ ನಿರೂಪಿಸಿದರು. ಪರಮೇಶ್ವರ ಎಸ್. ಕೋರಿ ವಂದಿಸಿದರು.

# ಕಮಲನಗರ ಪೊಲೀಸರಿಂದ ಪಡಿತರ ಅಕ್ಕಿ ಜಪ್ತಿ

**ಕಮಲನಗರ, ಸೆ.23–**ಕಮಲನಗರ ಪೊಲೀಸ್ ಠಾಣಾ ವ್ಯಾಪ್ತಿಯ ಔರಾದ–ಕಮಲನಗರ ರಸ್ತೆಯ ಮುಖಾಂತರ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುವ ಸಲುವಾಗಿ ಸಾಗಿಸುತ್ತಿರರುವ ಮಾಹಿತಿಯಂತೆ, ಶ್ರೀಮತಿ ಆಶಾ, ಪಿ.ಎಸ್.ಐ ರವರು ತಮ್ಮ ಸಿಬ್ಬಂದಿ ರವರೊಂದಿಗೆ ಶ್ರೀ ಶಿವಾನಂದ ತಂದೆ ಮಾಣೀಕರಾವ ಪಾಟೀಲ, ಆಹಾರ ನಿರೀಕ್ಷಕರು, ಕಮಲನಗರ ರವರ ಸಮಕ್ಷಮ ದಾಳಿ ಮಾಡಿ 8 ಕ್ವಿಂಟಲ್ ಪಡಿತರ ಅಕ್ಕಿ ಅ:ಕಿ: 27,200=00 ರೂಪಾಯಿ, ಒಂದು ವಾಹನ ಅ:ಕಿ 4,00,000=00 ರೂಪಾಯಿ ಮೌಲ್ಯದವುಗಳನ್ನು ವಶ ಪಡಿಸಿಕೊಂಡು ಆರೋಪಿತರ ವಿರುದ್ದ ಕಾನೂನಿನ ರಿತ್ಯ ಕ್ರಮ ಕೈಕೊಳ್ಳಲಾಗಿದೆ.

## ಸಿಂಧನೂರು ಗ್ರಾಮೀಣ ದಸರಾ:ಯಾಪಲಪರ್ವಿಯಲ್ಲಿ ಸೆ.26ರಂದು ನಾನಾ ಕಾರ್ಯಕ್ರಮ

**ರಾಯಚೂರು,ಸೆ.23–** ಸಿಂಧನೂರ ತಾಲೂಕಿನ ಯಾಪಲಪರ್ವಿ ಕ್ರಾಸ್ ಬಳಿ ವಿ.ಸಿ.ಬಿ. ಶಾಲೆಯ ಆವರಣದಲ್ಲಿ ಸೆ.26ರ ಸಂಜೆ 4.30ಕ್ಕೆ ದಸರಾ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಈ ಹಿನ್ನಲೆಯಲ್ಲಿ ಮಹಿಳೆಯರಿಂದ ಪೂರ್ಣ ಕುಂಭ–ಕಳಸ ಮತ್ತು ಆಕರ್ಷಕ ಕಲಾ ತಂಡಗಳೊಂದಿಗೆ ಯಾಪಲಪರ್ವಿ ಕ್ರಾಸ್‌ನಿಂದ ವಿ.ಸಿ.ಬಿ. ಶಾಲೆಯ ಆವರಣದವರೆಗೆ ಮೆರವಣಿ ಹಾಗೂ ಹಸಿರು ದಸರಾ ಕಾರ್ಯಕ್ರಮದಡಿಯಲ್ಲಿ ಕ್ಲಷ್ಟರ್ ವ್ಯಾಪ್ತಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರಾಜೇನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಸಾಂಸ್ಕೃತಿಕ ಕಾರ್ಯಕ್ರಮಗಳು: ಖ್ಯಾತ ಜನಪದ ಕಲಾವಿದ ವೀರು ಜಮಖಂಡಿ ಇವರಿಂದ ಸಂಗೀತ ಗಾಯನ ಕಾರ್ಯಕ್ರಮ ಹಾಗೂ ಕೊಪ್ಪಳದ ರಂಗಧಾರ ರೇಪರ್ಟರಿ ತಂಡದಿಂದ ಶಿಕ್ಷಣ, ಆರೋಗ್ಯ, ಕೃಷಿಗೆ ಸಂಬಂಧಿಸಿದಂತೆ ಜಾಗೃತಿ ರೂಪಕ ನಾಟಕಗಳು, ಗ್ರಾಮೀಣ ಕಲಾ ತಂಡಗಳಿಂದ ಕಲೆ–ಸಂಸ್ಕೃತಿ–ಜನಪದ ಕಾರ್ಯಕ್ರಮ ಸೇರಿದಂತೆ ಶಾಲಾ–ಕಾಲೇಜು ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಾಗಿದೆ.

ವಿವಿಧ ಸ್ಪರ್ಧೆಗಳು: ಯಾಪಲಪರ್ವಿ ಗ್ರಾಮದ ವಿ.ಸಿ.ಬಿ. ಶಾಲೆಯ ಹತ್ತಿರ ಕ್ಲಸ್ಟರ್ ಮಟ್ಟದ ಕ್ರೀಡಾಸ್ಪರ್ಧೆಗಳು ನಡೆಯಲಿವೆ.

ಪುರುಷರಿಗಾಗಿ ಕೆಸರಿನಲ್ಲಿ ಹಗ್ಗ ಜಗ್ಗಾಟ, ಕಬಡ್ಡಿ ಪಂದ್ಯಾವಳಿಗಳು ಹಾಗೂ ಮಹಿಳೆಯರಿಗಾಗಿ ಕೆಸರಿನಲ್ಲಿ ಹಗ್ಗ ಜಗ್ಗಾಟ, ಕಬಡ್ಡಿ, ರಂಗೋಲಿ, ರೊಟ್ಟಿ ತಟ್ಟುವ ಸ್ಪರ್ಧೆಗಳು ನಡೆಯಲಿವೆ ಎಂದು ಸಿಂಧನೂರು ದಸರಾ ಉತ್ಸವ ಸಮಿತಿ ಪ್ರಕಟಣೆ ತಿಳಿಸಿದೆ.

ಸಿಂಧನೂರು ತಾಲೂಕಾಡಳಿತ, ತಾಲೂಕ ಪಂಚಾಯಿತಿ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಲಿವೆ.

## ಕಸಾಪ ತಾಲೂಕ ಅಧ್ಯಕ್ಷರಾಗಿ ಮೌನೇಶ ಹಿರೇಹಣಗಿ ನೇಮಕ

ಯುವ ಮಾರ್ಗ ಸುದ್ದಿ



**ಸಿರವಾರ, ಸೆ.23–**ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರನ್ನಾಗಿ ಸಿರವಾರ ತಾಲೂಕು ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷರಾದ ಮೌನೇಶ ಹಿರೇಹಣಗಿ ಅವರನ್ನು ನೇಮಕ ಮಾಡಿ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು ಸೋಮವಾರ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ 7 ತಾಲೂಕುಗಳ ಪ್ರಸ್ತುತ ಇರುವ ಅಧ್ಯಕ್ಷರನ್ನು ಬದಲಿಸಿ ನೂತನ ಅಧದಯಕ್ಷ ನೇಮಕ ಮಾಡಲಾಗಿದೆ ಜಿಲ್ಲೆಯ ಸಿರವಾರ ಸೇರಿದಂತೆ ರಾಯಚೂರು, ದೇವದುರ್ಗ, ಮಾನ್ವಿ, ಮಸ್ಕಿ, ಲಿಂಗಸುಗೂರು ಹಾಗೂ ಸಿಂಧನೂರು ತಾಲೂಕುಗಳ ಕನ್ನಡ ಸಾಹಿತ್ಯ ಪರಿಷತ್ತಿಗೆ ನೂತನ ಅಧ್ಯಕ್ಷ ನೇಮಕ ಮಾಡಲಾಗಿದೆ.

## ದಸರಾ ಉತ್ಸವ ದೇವಿ ಪುರಾಣ– ಕಿಲ್ಲೆ ಬೃಹನ್ಮಠಕ್ಕೆ ರವಿ ಬೋಸರಾಜು ಭೇಟಿ



ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.23–**ದಸರಾ ಶರನ್ನವರಾತ್ರಿ ಮಹೋತ್ಸವ ಅಂಗವಾಗಿ ರಾಯಚೂರಿನ ಕಿಲ್ಲೆ ಬೃಹನ್ಮಠದಲ್ಲಿ ನಡೆಯುತ್ತಿರುವ ಶ್ರೀ ದೇವಿ ಪುರಾಣ ಪ್ರವಚನ ಹಾಗೂ ಮಂಗಲೋತ್ಸವ ಕಾರ್ಯಕ್ರಮ ನಿಮಿತ್ಯ ಕಾಂಗ್ರೆಸ್ ರಾಜ್ಯ ಯುವ ಮುಖಂಡರಾದ ರವಿ ಬೋಸರಾಜು ಅವರು ಭೇಟಿ ನೀಡಿ ಶ್ರೀ ಮಠದ ಪೀಠಾಧಿಪತಿಗಳಾದ ಶ್ರೀ ಶಾಂತಮಲ್ಲ ಸ್ವಾಮಿಗಳ ಆಶೀರ್ವಾದ ಪಡೆದರು.

ನಾಡಿನ ಸಮಸ್ತ ಜನತೆಗೆ ಶ್ರೀ ದೇವಿಯು ಒಳಿತನ್ನು ಮಾಡಲಿ ಎಂದು ವಿಶೇಷ ಪೂಜೆ ಸಲ್ಲಿಸುವ ಮೂಲಕ ಪ್ರಾರ್ಥಿಸಿದರು. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಮಾನತೆ ತರುವಲ್ಲಿ ಮಠ–ಮಾನ್ಯಗಳ ಪಾತ್ರ ದೊಡ್ಡದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಶ್ರೀಗಳು ರವಿ ಬೋಸರಾಜು ಅವರನ್ನು ಸನ್ಮಾನಿಸಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮಹಾಂತೇಶ ಪಟೀಲ್ ಅತ್ತನೂರು,ಜಿ ಶಿವಮೂರ್ತಿ, ಹಿರಿಯರಾದ ಬಸವರಾಜ ಪಾಟೀಲ್ ದರೂರು, ಬಿ ರಮೇಶ, ನಿರ್ಮಲಾ ಬೆಣ್ಣಿ, ಪವನ್ ಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಶ್ರೀಶಾಂಭವಿ ಹಿರೇಮಠದಲ್ಲಿ ಚಂಡಿಕಾ ಹೋಮ

ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.23–**ತಾಲೂಕಿನ ಬಾಗಲವಾಡ ಗ್ರಾಮದಲ್ಲಿನ ಶ್ರೀ ಶಾಂಭವಿ ಹಿರೇಮಠದಲ್ಲಿ ನವರಾತ್ರಿ ಅಂಗವಾಗಿ ಲೋಕಕಲ್ಯಾಣಕ್ಕಾಗಿ ಹಮ್ಮಿಕೊಂಡ ಚಂಡಿಕಾ ಹೋಮದ ಪೂರ್ಣಾಹುತಿಯನ್ನು ಬೃಹನ್ಮಠ ನೀಲಗಲ್ ಡಾ.ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ನೀಡಿ ಆಶೀರ್ವಚನ ನೀಡಿ ಲೋಕರಕ್ಷಕಿಯಾದ ಚಾಮುಂಡೇಶ್ವರಿ ,ಶಾಂಭವಿರೂಪದಲ್ಲಿ ಶ್ರೀಮಠದಲ್ಲಿ ನೆಲಸಿ ಭಕ್ತರನ್ನು ಉದ್ದರ ಮಾಡುತ್ತಿದ್ದಾರೆ ಚಂಡಿಕಾ ಹೋಮದಲ್ಲಿ ಭಾಗವಹಿಸಿ ವಿಶೇಷವಾದ ಫಲಗಳನ್ನು ಪಡೆಯುವಂತೆ ತಿಳಿಸಿದರು.

ದಸರಾ ಹಬ್ಬದ ಅಂಗವಾಗಿ ಶ್ರೀ ಶಾಂಭವಿ ಅಮ್ಮನವರ ಮೂರ್ತಿಗೆ ರುದ್ರಾಭಿಷೇಕ, ಕುಂಕುಮಾರ್ಚನೆ,ಮಹಾಮಂಗಳಾರತಿ ನೆರವೇರಿಸಲಾಯಿತು ಸಾವಿರಾರು ಭಕ್ತರು ಚಂಡಿಕಾ ಹೋಮದಲ್ಲಿ ಭಾಗವಹಿಸಿದರು. ಶ್ರೀ ಮಠದ ಶ್ರೀ ವೀರಭದ್ರಯ್ಯಸ್ವಾಮಿ ಹಿರೇಮಠ, ಪೂರ್ಣಿಮಾ , ಮಂಜುನಾಥಸ್ವಾಮಿ ಹಿರೇಮಠ, ಶ್ರೀವಿದ್ಯಾ, ಅಖಿಲೇಶ್ ಶಾಸ್ತ್ರಿ ಸೇರಿದಂತೆ ಗ್ರಾಮದ ಭಕ್ತರು ಭಾಗವಹಿಸಿದರು.



## ಸಮ್ ಕಾಲೇಜಿನ ವಿದ್ಯಾರ್ಥಿಗಳಿಂದ ಭೋಳೆಶಂಕರ ನಾಟಕ ಪ್ರದರ್ಶನ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಸೆ.23–**ಕಲೆ ಎನ್ನುವದು ಮನುಷ್ಯನಲ್ಲಿ ತನ್ನಿಂದ ತಾನೇ ಹುಟ್ಟುವ ಒಂದು ಅದ್ಭುತವಾದ ಸೃಷ್ಟಿ, ಆದರೆ ಕೆಲವೇ ಕೆಲವರನ್ನು ಅರಿಸಿಕೊಳ್ಳುತ್ತವೆ. ಈ ಕಲೆ ವಿದ್ಯಾರ್ಥಿ ಜೀವನದಲ್ಲಿ ಪ್ರಾರಂಭವಾದರೆ ಇನ್ನೂ ಅದ್ಭುತ, ಇಂತ ಪ್ರಯತ್ನವನ್ನು ಸಮ್ ಕಾಲೇಜಿನಲ್ಲಿ "ಬೆಪ್ಪತಕ್ಕಡಿ ಭೋಳೆ ಶಂಕರ" ನಾಟಕವನ್ನು ವಿದ್ಯಾರ್ಥಿಗಳು ಅಭಿನಯ ಮಾಡಿ ತೋರಿಸಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಶರಣಬಸವ ಗಣಾಚಾರಿ ಅಭಿಪ್ರಾಯಪಟ್ಟರು.

ಪಟ್ಟಣದ ಕರಡಕಲ್ ಹೊರವಲಯದಲ್ಲಿ ಇರುವ ಶ್ರೀ ಉಮಾ ಮಹೇಶ್ವರಿ ಕಾಲೇಜು ಆವರಣದಲ್ಲಿ ಹಮ್ಮಿಕೊಂಡ ಕರ್ನಾಟಕ ಸರ್ಕಾರ ನಾಟಕ ಅಕಾಡೆಮಿ ಬೆಂಗಳೂರು ಹಾಗೂ ಶ್ರೀ ಉಮಾ ಮಹೇಶ್ವರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ಡಾ, ಚಂದ್ರಶೇಖರ ಕಂಬಾರ ವಿರಚಿತ ಬೆಪ್ಪತಕ್ಕಡಿ ಭೋಳೆಶಂಕರ ನಾಟಕದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ನಾಟಕದಲ್ಲಿ ಅದ್ಭುತವಾಗಿ ಅಭಿನಯ ಮಾಡಿದ್ದಾರೆ ಎಂದು ನಾಟಕದಲ್ಲಿ ಅಭಿನಯಿಸಿದ ವಿದ್ಯಾರ್ಥಿಗಳನ್ನು ಗುಣಗಾನ ಮಾಡಿದರು. ಈ ನಾಟಕವನ್ನು ಸಿ ಬಿ ಚಿಲ್ಕರಾಗಿ ಉದ್ಘಾಟನೆ ಮಾಡಿ ಮಾತನಾಡಿದರು. ನಾಟಕವನ್ನು ರಮ ಜಾನಸಾಬ್ ನಿರ್ದೇಶನ ಮಾಡಿದರು.

ಈ ನಾಟಕದಲ್ಲಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿ ನಿರ್ಮಲಾ, ಸಖಿನಾ, ಅಮೃತ, ವಿಜಯ ಲಕ್ಷ್ಮಿ, ಸುಮಿತ್ರಾ,ಸುಸ್ಮಿತಾ, ಸಾವಿತ್ರಿ, ಅಪ್ಪಸಾನ್, ಪ್ರೀಯಾ, ಪೂಜಾ, ಚೈತ್ರಾ, ಪವಿತ್ರಾ, ಸಂಗಮೇಶ, ಚಂದ್ರು ಎಂಬ ವಿದ್ಯಾರ್ಥಿಗಳು ನಾಟಕದಲ್ಲಿ ಅಭಿನಯಿಸಿದ ಸೈ ಎಣಿಸಿಕೊಂಡರು.

ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಅಧಿಕಾರಿ ವಿನಯಕುಮಾರ ಗಣಾಚಾರಿ, ಅಮರೇಶಸ್ವಾಮಿ ತೋರಣದಿನ್ನಿ, ಮಲ್ಲಿಕಾರ್ಜುನ ಗೌಡುರ, ಕುಮಾರೆಪ್ಪ, ಪ್ರಾಚಾರ್ಯರಾದ ವಿರೇಶ್ ಆದೋನಿ, ಜಿ ಸುರೇಶ, ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

## ಜಿಎಸ್‌ಟಿ ಇಳಿಕೆಯಿಂದ ಎಲ್ಲ ವರ್ಗಕ್ಕೆ ಉಪಯೋಗ– ಕೆ.ಭಗವಂತ್ರಾಯ ನಾಯಕ

ಯುವ ಮಾರ್ಗ ಸುದ್ದಿ



**ಅರಕೇರಾ,ಸೆ.23–** ಜಿಎಸ್‌ಟಿ ಪ್ರಮಾಣವನ್ನು ಕಡಿಮೆ ಮಾಡಿ ನಿತ್ಯ ಬಳಕೆಯ ವಸ್ತುಗಳು ಸೇರಿದಂತೆ ಅನೇಕ ಉತ್ಪನ್ನಗಳ ಬೆಲೆ ಇಳಿಕೆಗೆ ಅನುಕೂಲಕರ ವಾತಾವರಣವನ್ನು ಕೇಂದ್ರ ಸರ್ಕಾರ ನಿರ್ಮಿಸಿದೆ ಎಂದು ಬಿಜೆಪಿ ಮಂಡಲ ಯುವ ಮೋರ್ಚಾ ಅಧ್ಯಕ್ಷ ಕೆ.ಭಗವಂತ್ರಾಯ ನಾಯಕ ಹೇಳಿದರು. ತಾಲೂಕಿನ ಕೊತ್ತದೊಡ್ಡಿ ಗ್ರಾಮದ ಕೇಂದ್ರ ಸರ್ಕಾರ ಜಿಎಸ್‌ಟಿ ಪ್ರಮಾಣ ಇಳಿಸಿದ ಪ್ರಯುಕ್ತ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿದ ಸಂಭ್ರಮಾಚರಣೆಯಲ್ಲಿ ಭಾಗವಹಿಸಿ ಮಂಗಳವಾರ ಮಾತನಾಡಿದರು. ಜಿಎಸ್‌ಟಿಯಲ್ಲಿ ಹಲವು ವಸ್ತುಗಳ ತೆರಿಗೆ ಕಡಿಮೆ ಮಾಡುವುದರ ಮೂಲಕ ಕೇಂದ್ರ ಸರ್ಕಾರ ನವರಾತ್ರಿಯ ಉಡುಗೊರೆ ನೀಡಿದೆ. ಇದರಿಂದ ದೇಶದ ಶೇ. 99 ರಷ್ಟು ಜನರಿಗೆ ಪ್ರಯೋಜನವಾಗಲಿದೆ. ಪ್ರತಿ ಕುಟುಂಬ ತಿಂಗಳಿಗೆ 2 ಸಾವಿರದಷ್ಟು ಉಳಿಸಲು ಇದು ಸಹಕಾರಿಯಾಗಲಿದೆ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಪದಾಧಿಕಾರಿಗಳು, ಮುಖಂಡರು ಭಾಗವಹಿಸಿದ್ದರು

## ಕಾಂಗ್ರೆಸ್‌ನಿಂದ ಮಾತ್ರ ಬಡವರ ಏಳಿಗೆ

ಯುವ ಮಾರ್ಗ ಸುದ್ದಿ



**ಅರಕೇರಾ ಸೆ.23–**ಪ್ರತಿಯೊಂದು ಸಮಾಜದಲ್ಲಿನ ಬಡವರ ಏಳಿಗೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಶ್ರೀದೇವಿ ಆರ್. ನಾಯಕ ಹೇಳಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಬಿ.ಗಣೇಕಲ್ ಗ್ರಾಮದ ಜೆಡಿಎಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೇಂದ್ರದಲ್ಲಿ ಅಧಿಕಾರ ನಡೆಸುತಿರುವ ಬಿಜೆಪಿ ಸರ್ಕಾರ, ಬಡವರ ಬದುಕಿನ ಮೇಲೆ ಬರೆ ಎಳೆಯುವ ಕೆಲಸ ಮಾಡಿದೆ. ಹೀಗಾಗಿ ರಾಜ್ಯ ಸರ್ಕಾರ ಬಡ ಜನರ ಕಲ್ಯಾಣಕ್ಕೆ ಪಂಚ ಗ್ಯಾರಂಟಿ ಯೋಜನೆ ಜಾರಿಗೆ ತಂದಿದೆ. ಕಾಂಗ್ರೆಸ್ ಸರ್ಕಾರದ ಜನಪರ ಕಾಳಜಿ ಜನತೆಗೆ ಮೆಚ್ಚುಗೆ ತಂದಿದೆ. ಹೀಗಾಗಿ ಮುಂಬರುವ ತಾಲ್ಲೂಕು ಪಂಚಾಯತ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಬಿಜೆಪಿಗೆ ಹಾಗೂ ಜೆಡಿಎಸ್ ಗೆ ತಕ್ಕ ಪಾಠ ಕಲಿಸಬೇಕು ಎಂದರು. ಅಧಿಕಾರ ಇರಲಿ ಇಲ್ಲದಿರಲಿ ನಮ್ಮ ಕುಟುಂಬ ಸದಾ ಕ್ಷೇತ್ರದ ಜನರ ಜೊತೆಗಿದೆ. ನಮ್ಮ ಕೈಲಾದ ಸಹಾಯ, ಸಹಕಾರ ಮಾಡುತ್ತಿದ್ದೇವೆ ಎಂದರು. ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ಸುಮಾರು 30 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪಕ್ಷದ ಶಾಲು ಹಾಕಿ ಬರಮಾಡಿಕೊಂಡರು.

ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕ ಅಧ್ಯಕ್ಷ ದಸ್ತಗಿರಿ ಸಾಬ ಕೊತ್ತದೊಡ್ಡಿ,ಶಿವರಾಜ್ ಪೂಜಾರಿ, ಶಿವರಾಜ್ ಮಾದೇ, ಆಲಿ ಸಾಬ್, ಮುಲ್ಲಾ ಸಾಬ್, ಹರ್ಷವರ್ಧನ್ ಮೇಟಿ, ಹನುಮಂತ್ರಾಯ, ಕಿಷ್ಟಪ್ಪ ನಾಯಕ ಚಿಕ್ಕಗುಡ್ಡ, ಹನುಮಂತ್ರಾಯ ಗಾಲಿ, ಶಿವಪ್ಪ ನಿಂಗಲದೊಡ್ಡಿ, ಲಿಂಗಣ್ಣ ನಾಯಕ ಹವಾಲ್ದಾರ್ ಕುಮಾರ ರಾಠೋಡ್ ರಾಜು ನಾಯಕ, ವೆಂಕಟೇಶ ಮಾದೇ, ಯಕ್ಬಲ್ ಸಾಬ್, ಖಾಜಾ ಹುಸೇನ್, ಇದ್ದರು.

## ಸೆ.26ರಂದು ಜೆಸ್ಕಾಂ ಗ್ರಾಹಕರ ಕುಂದುಕೊರತೆ ಸಭೆ

**ರಾಯಚೂರು,ಸೆ.23–** ಜೆಸ್ಕಾಂ ಶಕ್ತಿನಗರದ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಕಚೇರಿಯಲ್ಲಿ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಸೆ.26ರ ಬೆಳಿಗ್ಗೆ 10 ಗಂಟೆಗೆ ಗ್ರಾಹಕರ ಕುಂದುಕೊರತೆ ಸಭೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶಕ್ತಿನಗರದ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಸಹಾಯಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಸೆ.23–**ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ 2025–26ನೇ ಸಾಲಿಗೆ ವಿಪ್ರ ಸ್ವ–ಉದ್ಯಮ ನೇರ ಸಾಲ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರು ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ– ಸಹಾಯಧನ ಮಂಜೂರಿ ಮಾಡಲಾಗುತ್ತದೆ. ಬ್ರಾಹ್ಮಣ ಸಮುದಾಯದ ಸಾಮಾನ್ಯ ವರ್ಗಕ್ಕೆ ಸೇರಿದ ಹಿಂದುಳಿದ ಬ್ರಾಹ್ಮಣ ಸಮುದಾಯದವರು ಸ್ವಯಂ ಉದ್ಯೋಗ ವೃತ್ತಿಗಳಾದ ಹಸು ಸಾಕಾಣಿಕೆ, ಗುಡಿ ಕೈಗಾರಿಕೆ, ಸಣ್ಣ ಕೈಗಾರಿಕೆ, ಹೋಟೆಲ್ ಉದ್ಯಮ, ಟ್ಯಾಕ್ಸಿ ಇತ್ಯಾದಿ ಇತರೆ ಯಾವುದೇ ವ್ಯಾಪಾರ ವಹಿವಾಟುಗಳನ್ನು ಕೈಗೊಳ್ಳಬಹುದಾಗಿದೆ. ವಾರ್ಷಿಕವಾಗಿ ಶೇ.4 ದರದಲ್ಲಿ ಕನಿಷ್ಠ 1.00 ಲಕ್ಷ ರೂ. ಹಾಗೂ ಗರಿಷ್ಠ 2.00 ಲಕ್ಷಗಳ ರೂ. ಆರ್ಥಿಕ ನೆರವು ಮಂಜೂರು ಮಾಡಲಾಗುವುದು.

ಅರ್ಹತೆ: ಬ್ರಾಹ್ಮಣ ಸಮುದಾಯದ ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರಬೇಕು. ಅರ್ಜಿದಾರರು ಚಾಲ್ತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದ ಪ್ರಮಾಣಪತ್ರ ಹೊಂದಿರಬೇಕು ( 8 ಲಕ್ಷ ಆದಾಯ ಮಿತಿ), ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 65 ವರ್ಷದ ಒಳಗಿನವರಾಗಿರಬೇಕು. ಒಂದು ಕುಟುಂಬದಿಂದ ಒಬ್ಬರು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಮಹಿಳೆಯರಿಗೆ ಶೇ.33, ವಿಶೇಷಚೇತನರಿಗೆ ಶೇ.5 ಮೀಸಲಾತಿ ನೀಡಲಾಗುವುದು. ಅರ್ಜಿದಾರರ ಆಧಾರ್ ಗೆ ಮೊಬೈಲ್ ಸಂಖ್ಯೆಯೊಂದಿಗೆ ವೆಬ್‌ಸೈಟ್: ತಿತಿತಿ.ಇಛಿಜಛಿ.ಇಚಿಡಿಟಿಚಿಣಚಿಞಚಿ.ರಠಡಿ.ಟಿ ನಲ್ಲಿ ಅಕ್ಟೋಬರ್ 31ರ ಸಂಜೆ 5ಗಂಟೆವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ: 8762249230ಗೆ ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯ ಮಿಷನ್ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ಜಿ.ಯು. ಹುಡೇದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿಂಧನೂರು ಗ್ರಾಮೀಣ ದಸರಾ: ಸೆ.25ರಂದು ಕ್ರೀಡೆ, ಸಾಂಸ್ಕೃತಿಕ ದಸರಾ

**ರಾಯಚೂರು,ಸೆ.23–** ಜಿಲ್ಲೆಯ ಸಿಂಧನೂರಿನ ತಾಲೂಕ ಆಡಳಿತ, ತಾಲೂಕ ಪಂಚಾಯಿತಿ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರ ತಾಲೂಕಿನ ಆರ್.ಹೆಚ್.ಕಾಲೋನಿ–2 ಗ್ರಾಮದ ಸರ್ಕಾರಿ ಶಾಲೆಯ ಹತ್ತಿರ ಸೆ.25ರ ಸಂಜೆ 4.30ಕ್ಕೆ ದಸರಾ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಈ ನಿಮಿತ್ತ ಮಹಿಳೆಯರಿಂದ ಪೂರ್ಣ ಕುಂಭ–ಕಳಸ ಮತ್ತು ಆಕರ್ಷಕ ಕಲಾ ತಂಡಗಳೊಂದಿಗೆ ಆರ್.ಹೆಚ್.ಕಾಲೋನಿ–2ರ ಕೆರೆಯಿಂದ ಸರಕಾರಿ ಶಾಲೆಯವರೆಗೆ ಮೆರವಣಿಗೆ ಹಾಗೂ ಹಸಿರು ದಸರಾ ಕಾರ್ಯಕ್ರಮದಡಿಯಲ್ಲಿ ಕ್ಲಷ್ಟರ್ ವ್ಯಾಪ್ತಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಲಿವೆ.

ಜಿಲ್ಲಾಧಿಕಾರಿಗಳಾದ ನೀತೀಶ್ ಕೆ., ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಭಾಗಿಯಾಗುವವರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು: ಸರಿಗಮಪ ಖ್ಯಾತಿಯ ಸುಪ್ರೀತ್ ಮತ್ತು ವರ್ಣಾ ಬೆಂಗಳೂರು ಇವರಿಂದ ಸಂಗೀತ ಕಾರ್ಯಕ್ರಮ, ಕೊಪ್ಪಳದ ರಂಗಧಾರ ರೇಪರ್ಟರಿ ತಂಡದಿಂದ ಶಿಕ್ಷಣ, ಆರೋಗ್ಯ, ಕೃಷಿಗೆ ಸಂಬಂಧಿಸಿದಂತೆ ಜಾಗೃತಿ ರೂಪಕ ನಾಟಕಗಳು, ಗ್ರಾಮೀಣ ಕಲಾ ತಂಡಗಳಿಂದ ಕಲೆ–ಸಂಸ್ಕೃತಿ–ಜನಪದ ಕಾರ್ಯಕ್ರಮಗಳು ಹಾಗೂ ವಿವಿಧ ಕಾಲೇಜು ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆರ್.ಹೆಚ್.ಕಾಲೋನಿ–2ರಲ್ಲಿ ಕ್ಲಸ್ಟರ್ ಮಟ್ಟದ ಕ್ರೀಡಾ ಸ್ಪರ್ಧೆಗಳು ನಡೆಯಲಿದ್ದು, ಪುರುಷರಿಗಾಗಿ ಕೆಸರಿನಲ್ಲಿ ಹಗ್ಗ ಜಗ್ಗಾಟ, ಕಬಡ್ಡಿ ಪಂದ್ಯಾವಳಿಗಳಿವೆ. ಮಹಿಳೆಯರಿಗಾಗಿ ಕೆಸರಿನಲ್ಲಿ ಹಗ್ಗ ಜಗ್ಗಾಟ, ಕಬಡ್ಡಿ, ರಂಗೋಲಿ, ರೊಟ್ಟಿ ತಟ್ಟುವ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಂಧನೂರು ದಸರಾ ಉತ್ಸವ ಸಮಿತಿಯ ಪ್ರಕಟಣೆ ತಿಳಿಸಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H